विश्व हिन्दू परिषद
धर्मो रक्षति रक्षितः

# ಹಿಂದು ವಾಣಿ

ಸಂಪುಟ–10
ಸಂಚಿಕೆ–8
ಕಾರ್ತಿಕ–ಮಾರ್ಗಶಿರ
ನವೆಂಬರ್ 2011
ಬೆಲೆ ರೂ. 10.00
CPMG/KA/BGS-636/2009-11

## ಸದಾನಂದ

ಸದಾನಂದಜಿ ಕಾಕಡೆಯವರ
ಸ್ಮರಣ ಸಂಚಿಕೆ



## "ಸದಾನಂದ" ಲೋಕಾರ್ಪಣೆ ಬೆಂಗಳೂರು 15.10.2011



ವಿಜಯಕುಮಾರ ರೆಡ್ಡಿ, ಬಿ.ಎನ್. ಮೂರ್ತಿ, ಬಾಬುರಾವ್ ದೇಸಾಯಿ, ರಾಘವರೆಡ್ಡಿ, ಡಾ.ವೀರೇಂದ್ರ ಹೆಗ್ಗಡೆ
ವೈ.ಕೆ. ರಾಘವೇಂದ್ರರಾವ್, ಡಾ. ಶಿವಕುಮಾರಸ್ವಾಮಿ, ಚಂದ್ರಶೇಖರ ಭಂಡಾರಿ





ಹಿಂದುವಾಣಿ

ಗೌರವ ಸಂಪಾದಕ
**ಟಿ.ಎ.ಪಿ. ಶೆಣೈ**
ಇ-hinduvani@yahoo.com

ಶ್ರೀ ಖರ ನಾಮಸಂವತ್ಸರ
ಕಾರ್ತಿಕ-ಮಾರ್ಗಶಿರ
**ನವೆಂಬರ್ 2011**

**ಪ್ರಕಾಶಕರು**
**ರಮೇಶ್ ಮ. ಪರಾಂಡೆ**
**ವಿಶ್ವಹಿಂದು ಪರಿಷದ್, ಕರ್ನಾಟಕ**
'ಧರ್ಮಶ್ರೀ', 91, ಶಂಕರಪುರಂ,
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು - 560 004
ದೂ. 080-26604641

**ಚಂದಾವಿವರ**
ಬಿಡಿ ಪ್ರತಿ ರೂ. 10/-
ವಾರ್ಷಿಕ ಚಂದಾ ರೂ. 80/-
ದ್ವೈವಾರ್ಷಿಕ ಚಂದಾ ರೂ. 150/-

**ಮುದ್ರಕರು**
ವಿಶ್ವಾಸ್ ಪ್ರಿಂಟ್ಸ್
ಚಾಮರಾಜಪೇಟೆ, ಬೆಂಗಳೂರು
ದೂ. 080-26606088
ಇಮೇಲ್:vishwasprints@yahoo.co.in

**ಹಿಂದುವಾಣಿಗೆ ಚಂದಾದಾರರಾಗಿರಿ**
ಎಂ.ಓ/ಡಿ.ಡಿ.ಗಳನ್ನು
**"ವಿಶ್ವಹಿಂದು ಪರಿಷದ್"**
ಹೆಸರಿನಲ್ಲಿ ಕಳುಹಿಸಬಹುದು

**ಹಿಂದುವಾಣಿ E- ಪತ್ರಿಕೆ**
**ನೋಡಿ :www.vhp.org**

# ಅಕ್ಷರವಾಯಿತು ಅವರ ಜೀವನ

ಎಪ್ಪತ್ತರ ದಶಕದಲ್ಲಿ ವಿಶ್ವ ಹಿಂದು ಪರಿಷದ್ ಕರ್ನಾಟಕ ಪ್ರಾಂತ್ಯದ ಸಂಘಟನಾಕಾರ್ಯದರ್ಶಿಗಳಾಗಿ ಬಂದ ಸದಾನಂದಜಿ ಕಾಕಡೆಯವರು ನಂತರ ದಕ್ಷಿಣಾಂಚಲದ ಹೊಣೆಯನ್ನು ಹೊತ್ತರು. ಮುಂದೆ ಅಂತರ್ರಾಷ್ಟ್ರೀಯ ಉಪಾಧ್ಯಕ್ಷರಾಗಿಯೂ, ಸಂಯುಕ್ತ ಮಹಾಕಾರ್ಯದರ್ಶಿಗಳಾಗಿಯೂ ಯಶಸ್ವಿಯಾದರು.

ತಮ್ಮ ಜೀವನದ ಕೊನೆಯವರೆಗೂ ಅವರ ಚಿಂತನೆ, ಕಳಕಳಿಗಳು ಒಂದಿನಿತೂ ಕುಂದಿರಲಿಲ್ಲ. ರಾಮಜನ್ಮಭೂಮಿ, ಹಿಂದು ಸಂಘಟನೆ, ಹಿಂದು ರಾಷ್ಟ್ರದ ಪುನರ್ವೈಭವ ಇವನ್ನು ಬಿಟ್ಟು ಅವರು ಮತ್ತೇನನ್ನೂ ಚಿಂತಿಸಲಿಲ್ಲ; ಬಯಸಲಿಲ್ಲ. ಅವರ ನಿರ್ಮಾಣ ಕೌಶಲಕ್ಕೆ ಅವರದ್ದೇ ಛಾಪು ಇದ್ದಿತು. ಅದು ಸಕ್ರಿಯ ಕಾರ್ಯಕರ್ತರ ಸಮೂಹವೇ ಆಗಿರಲಿ; ಅಥವಾ ಸ್ಥಾವರಸೌಧಗಳೇ ಇರಲಿ; ಅಲ್ಲೆಲ್ಲ ಕಾಣಬಹುದಾಗಿರುವುದು ಸದಾನಂದಜಿಯವರ ಅನುಭವದ ವಾಸ್ತುಪ್ರಜ್ಞೆ, ಅವರ ಮಗುಮನಸ್ಸಿನ ಸಿಟ್ಟನ್ನೂ, ಪ್ರೀತಿಯನ್ನೂ, ಸಮಾನವಾಗಿ ಅನುಭವಿಸಿದ ಕಾರ್ಯಕರ್ತರು; ಜೊತೆಯಲ್ಲಿದ್ದ ಹಿರಿಯರು. ಅವ್ಯಾಹತವಾಗಿ ನಡೆಯುತ್ತಿದ್ದ ಅವರ ಪ್ರವಾಸದ ಪರಿ, ಕಾರ್ಯಕರ್ತರ ಕ್ಷಮತೆಯನ್ನು ನಿಕಷಕ್ಕೆ ಒಡ್ಡುವ ಅವರ ಬೈಠಕ್‌ಗಳ ನಿರ್ದಾಕ್ಷಿಣ್ಯ ಬಗೆ; ಎಲ್ಲ ಬೆಳವಣಿಗೆಗಳನ್ನು ತಮ್ಮ ಸಾಮುದಾಯಿಕ ವಿವೇಚನೆಯಿಂದ ವಿಶ್ಲೇಷಿಸುವ ಅವರ ರೀತಿ, ಇವೆಲ್ಲವನ್ನೂ ಲಿಪಿಬದ್ಧಗೊಳಿಸಿರುವರು. ಸದಾನಂದಜಿಯವರ ಅಕ್ಷರಜೀವನ ಮೂಡಿಸಿದ ದಾಪುಹೆಜ್ಜೆಗಳ ಗುರುತಾಗಿ ನಮ್ಮ ಪ್ರಾಂತ್ಯ ಅಧ್ಯಕ್ಷರಾದ ಡಾ॥ ಶಿವಕುಮಾರಸ್ವಾಮಿ ಅವರ ಗೌರವ ಸಂಪಾದಕತ್ವದಲ್ಲಿ ಸ್ಮರಣಸಂಚಿಕೆಯಾದ 'ಸದಾನಂದ'ವು ಲೋಕಾರ್ಪಣೆಗೊಂಡಿದೆ. ಅಲ್ಲಿನ ಕೆಲವೇ ಕೆಲವು ಪ್ರಾತಿನಿಧಿಕ ಲೇಖನಗಳನ್ನು ಹಿಂದುವಾಣಿಯಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

ಇದೇ ಅಕ್ಟೋಬರ್ 15 ಶನಿವಾರದಂದು ಬೆಂಗಳೂರಿನ ಕೇಶವಶಿಲ್ಪ ಸಭಾಂಗಣದಲ್ಲಿ ನಡೆದ ಸುಂದರ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಪೂಜ್ಯ ಧರ್ಮಾಧಿಕಾರಿಗಳಾದ ಡಾ। ಡಿ.ವೀರೇಂದ್ರ ಹೆಗ್ಗಡೆಯವರು ಈ ಸ್ಮೃತಿಸಂಚಿಕೆಯನ್ನು ಲೋಕಾರ್ಪಣೆಗೊಳಿಸಿದರು. ನ್ಯಾಯಮೂರ್ತಿ ಡಾ॥ ರಾಮಾಜೋಯಿಸ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು.

## ಭಾರತ ದರ್ಶನ

ನಂ. 163, 2ನೇ ಬ್ಲಾಕ್, ಮಂಜುನಾಥರಸ್ತೆ, ತ್ಯಾಗರಾಜನಗರ,ಬೆಂಗಳೂರು–28.
Tel: 080-26765381,080-22278231; Mob: 9448078231; web: www.bharathasamskruthi.com

### ಭಾರತ ಸಂಸ್ಕೃತಿ ಪ್ರಕಾಶನದವರಿಂದ ಮತ್ತೊಂದು ಮಹಾನ್ ಕೊಡುಗೆ

ಭಾರತ ದರ್ಶನ ಸಂಸ್ಥೆಯು ಕನ್ನಡ ನಾಡಿಗೆ ಕಳೆದ **54** ವರ್ಷಗಳಿಂದ ಭಾರತ ದೇಶದ ಆರ್ಷ ಗ್ರಂಥಗಳಾದ ಮಹಾಭಾರತ, ರಾಮಾಯಣ, ಭಾಗವತ, ಹರಿವಂಶ ಹಾಗೂ ಮಾರ್ಕಂಡೇಯಪುರಾಣಗಳನ್ನು ಸಂಸ್ಕೃತ ಭಾಷೆಯಿಂದ ಸರಳ ಕನ್ನಡದಲ್ಲಿ ಹೊರತಂದು, ಸಮರ್ಪಿಸಿದೆ.

ಅಂತೆಯೇ ಭಾರತ ದರ್ಶನ ಸಂಸ್ಥೆಯ ಅಂಗಸಂಸ್ಥೆಯಾದ ಭಾರತ ಸಂಸ್ಕೃತಿ ಪ್ರಕಾಶನವು ಮಕ್ಕಳಿಗೆಂದೇ *ಮಹಾಭಾರತದ ಮಹಾಪಾತ್ರಗಳು, ರಾಮಾಯಣದ ಮಹಾಪಾತ್ರಗಳು, ಮಹಾಪುರುಷ ಮಹರ್ಷಿಗಳು, ಮಹಾಪುರಾಣಗಳ ಮಹಾಪಾತ್ರಗಳು ಹಾಗೂ ವೇದೋಪನಿಷತ್ತುಗಳ ಮಹಾಪಾತ್ರಗಳು* ಎಂಬ **10** ಪುಸ್ತಕಗಳುಳ್ಳ **5** ಮಾಲಿಕೆಗಳನ್ನು ಹೊರತಂದಿದೆ.

ಈಗ ಈ ಸಂಸ್ಥೆಯಿಂದ ಸನಾತನ ಆರ್ಯಭಾರತೀಯರ ಸಂಪ್ರದಾಯಗಳಲ್ಲಿ ನಡೆದುಬರುತ್ತಿರುವ ಪ್ರಸಿದ್ಧವಾದ ಹಬ್ಬ-ಹರಿದಿನಗಳಾದ ಯುಗಾದಿ, ರಾಮನವಮೀ, ಹನುಮಜ್ಜಯನ್ತೀ, ಅಕ್ಷಯತೃತೀಯಾ, ನರಸಿಂಹ ಜಯನ್ತೀ, ನಾಗರಪಂಚಮೀ, ವರಮಹಾಲಕ್ಷ್ಮೀವ್ರತ, ಉಪಾಕರ್ಮ, ಗೌರೀ-ಗಣೇಶ ಹಬ್ಬ, ಅನಂತನ ಹಬ್ಬ, ನವರಾತ್ರಿ, ದೀಪಾವಳಿ, ಮಕರ ಸಂಕ್ರಾಂತಿ, ಮಹಾಶಿವರಾತ್ರಿ ಮುಂತಾದುವುಗಳನ್ನು ಕುರಿತ ವಿಚಾರಪೂರ್ಣಕವಾದ ಲೇಖನಗಳ ಮಾಲೆಗಳನ್ನು ಒಳಗೊಂಡ ಗ್ರಂಥ—

### ಭಾರತೀಯರ ಹಬ್ಬ-ಹರಿದಿನಗಳು ಲೋಕಾರ್ಪಣೆಯಾಗಿದೆ

ಹಬ್ಬ-ಹರಿದಿನಗಳನ್ನು ಕುರಿತು ಅವಿವೇಕ, ಆಲಸ್ಯ, ಅಭಿಮಾನಶೂನ್ಯತೆಗಳಿಂದ ಉಂಟಾಗಿರುವ ದೋಷಗಳನ್ನು ಯಥಾಶಕ್ತಿ ಸರಿಪಡಿಸುವ ದಿಶೆಯಲ್ಲಿ ಒಂದು ಪ್ರಯತ್ನ ಈ ಗ್ರಂಥ. ಹಬ್ಬ-ಹರಿದಿನಗಳ ವಿಭಾಗ, ಸಾಮಾನ್ಯ ಸ್ವರೂಪ, ಆವಶ್ಯಕತೆ, ಪ್ರಾಮುಖ್ಯ, ವಿಭಾಗ, ವಿಶ್ಲೇಷಣೆ, ಸುಕೃತ-ವಿಕೃತ ರೂಪಗಳು, ವಿಶಿಷ್ಟ ರೂಪಗಳು, ಕಾಲ, ದ್ರವ್ಯ, ಆಚರಣೆಯ ವಿಧಾನ, ಪ್ರಯೋಜನ ಮುಂತಾದ ಎಲ್ಲ ಮುಖ್ಯ ವಿಷಯಗಳನ್ನೂ ವೈಜ್ಞಾನಿಕವಾಗಿ ವಿವೇಚನೆ ಮಾಡಿರುವ ಲೇಖನಗಳನ್ನು **ಭಾರತ ದರ್ಶನ ಪ್ರಕಾಶನದ ಅಧ್ಯಕ್ಷರಾದ ಶ್ರೀಶ್ರೀ ರಂಗಪ್ರಿಯ ಶ್ರೀಶ್ರೀಗಳವರ ಲೇಖನಿಯಿಂದ ಹೊರಬಂದ ಲೇಖನಮಾಲೆ.**

**ನಮ್ಮ ಹಿಂದುವಾಣಿಯ ಬಾಂಧವರುಗಳು ನವೆಂಬರ್ 30ರವರೆಗೆ ಕೆಳಗೆ ಮುದ್ರಿಸಿದ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಭಾರತ ದರ್ಶನ ಸಂಸ್ಥೆಯಿಂದ ಪಡೆದುಕೊಳ್ಳಬಹುದು.**

---

**ಬೆಲೆ: ರೂ. 500/- ವಿಶೇಷ ರಿಯಾಯಿತಿ ಬೆಲೆ ರೂ. 350/-**

(ಕ್ರೌನ್ 1/4,ಸುಮಾರು 650 ಪುಟಗಳು)—ನಿಮ್ಮ ಪ್ರತಿಗಳನ್ನು ಇಂದೇ ಕಾದಿರಿಸಿ
ಪ್ರತಿಯೊಬ್ಬ ಭಾರತೀಯರ ಮನೆಗಳಲ್ಲಿ ಸದಾಕಾಲಕ್ಕೂ ಇರಲೇಬೇಕಾದ ಶ್ರೀಕೋಶ

---

<u>ಸೂಚನೆ :</u> ಪ್ರತಿಗಳನ್ನು ಭಾರತ ದರ್ಶನ (ಮೇಲೆ ಮುದ್ರಿತವಾದ ವಿಳಾಸ)ದಲ್ಲಿ ಪಡೆದುಕೊಳ್ಳಬಹುದು. ಈ ಕೊಡುಗೆ ನವೆಂಬರ್ 30 ರವರೆಗೆ ಮಾತ್ರ.
ಹೊರ ಊರಿನವರು ಅಂಚೆ ವೆಚ್ಚ ರೂ. 25/-ಅನ್ನು ಸೇರಿಸಿ ಕಳುಹಿಸುವುದು. Regd. post ಮೂಲಕ ಪುಸ್ತಕವನ್ನು ಕಳುಹಿಸಲಾಗುವುದು.

## ಒಳದನಿ


1 ಸಂಪಾದಕೀಯ

4 ಗೌರವ ಸಂಪಾದಕರ ನುಡಿ

7 ಸಮಗ್ರತೆ ಮೂಡಲಿ

9 ಸದಾ (ಕವನ)

11 ಸಂಘಟಕ ಸದಾನಂದಜಿ

17 ನಮ್ಮ ದಾದಾನ ಸಮರ್ಪಿತ ಜೀವನ

18 ಹಿಂದುತ್ವದ ಸೇನಾನಿ ಸದಾನಂದಜಿ

23 ವ್ಯಕ್ತಿ ಅಳಿಯಿತು ಪ್ರೇರಣೆ ಉಳಿಯಿತು

25 ಕರ್ಮಠತೆ ನಿಸ್ಪೃಹತೆಗಳ ಸಂಗಮ ಸದಾನಂದಜಿ

29 ನನ್ನ ಸ್ಮೃತಿಯಲ್ಲಿ ಸದಾನಂದಜೀಯವರು

32 ಅವರು ಪಡುವ ಶ್ರಮವೇ ನಮಗೆ ಮಾದರಿಯಾಯಿತು

36 ಬೃಹತ್ ಕಾರ್ಯಕ್ರಮಗಳ ಯೋಜಕ ಸದಾನಂದಜೀ

38 ಅವರಿಗೆ ಹಿಂದುದೇಶ ಹಿಂದುಸಮಾಜ ಅವುಗಳ ಅಖಂಡತೆ ಬಿಟ್ಟು ಬೇರೆ ಪರಿವೆಯೇ ಇರಲಿಲ್ಲ –ಡಾ. ಡಿ. ವೀರೇಂದ್ರ ಹೆಗ್ಗಡೆ



ವಿಶ್ವ ಹಿಂದು ಪರಿಷದ್, ಬೆಂಗಳೂರು ಮಹಾನಗರ

**ಭಜಗೋವಿಂದಂ ಸ್ತೋತ್ರಮಾಲೆಯ**
**ಅಖಂಡ ಪಾರಾಯಣ ಯಜ್ಞ**

ಯುಗಾಬ್ದ 5113, ಶ್ರೀ ಖರನಾಮ ಸಂವತ್ಸರ, ಕಾರ್ತೀಕ ಬಹುಳ ದಶಮಿ
20.11.2011ನೇ ಭಾನುವಾರ ಬೆಳಿಗ್ಗೆ 7.30ರಿಂದ ಸಂಜೆ 7.30ರವರೆಗೆ
ಸ್ಥಳ: ಶ್ರೀ ಶೃಂಗೇರಿ ಶಂಕರಮಠದ ಪ್ರಾರ್ಥನಾ ಮಂದಿರ,
ಶಂಕರಪುರಂ, ಬೆಂಗಳೂರು

ತಮಗೆಲ್ಲರಿಗೂ ಸ್ವಾಗತ

## ಗೌರವ ಸಂಪಾದಕರ ನುಡಿ



**ಸದಾನಂದ ಕಾಕಡೆ :** ಸಂಘ ವಲಯಗಳಲ್ಲಿ ಅತ್ಯಂತ ಪರಿಚಿತ ಹೆಸರು. ಭಯ–ಮೆಚ್ಚುಗೆಗಳಿಂದ ಕೂಡಿದ ಗೌರವ ಮೂಡಿಸುವ ವ್ಯಕ್ತಿತ್ವ. ಶಿಸ್ತಿನ ಮೂರ್ತಿ ಸ್ವರೂಪ. ಕರ್ತವ್ಯ ಕಠೋರತೆಯ ಸಾಕ್ಷಾತ್ಕಾರ. ಹಿಂದುತ್ವ ನಿಷ್ಠೆ, ದೇಶಪ್ರೇಮಗಳ ಉದಾತ್ತ ಸಂಗಮ. ಸದಾನಂದಜಿಯವರ ಹೆಸರು ಹೇಳುತ್ತಲೇ ಬಹುಶಃ ಅವರನ್ನು ಬಲ್ಲವರೆಲ್ಲರ ಮನದಲ್ಲೂ ಮೂಡುವ ಚಿತ್ರ ಇದು.

ಸರಳ ಜೀವನ ನಡೆಸುತ್ತಲೇ ಉದಾತ್ತ ಬದುಕು ಬಾಳಿ ತೋರಿದ ಸದಾನಂದಜಿ ತುಂಬ ಸನಿಹದಿಂದ ಕಂಡವರಿಗೂ ವಿಸ್ಮಯವಾಗಿಯೇ ಉಳಿದರು. ಕಾರಣ, ಅವರ ಅಪಾರ ಸಾಧನೆ. ಒಂದು ಸಣ್ಣ ಸಸಿಯಾಗಿ ಪ್ರಾರಂಭಗೊಂಡ ಕರ್ನಾಟಕ ವಿಶ್ವ ಹಿಂದು ಪರಿಷತ್ತಿನ ಸಂಘಟನೆಯನ್ನು ಜನಾಸರೆಯ ಹೆಮ್ಮರವಾಗಿ ಬೆಳೆಸಿದ ಕೀರ್ತಿ ಸದಾನಂದಜಿಯವರದ್ದು. ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಆಕರ್ಷಿಸಿ ಹಿಂದು ರಕ್ಷಾ ದೀಕ್ಷೆಯನ್ನು ಕೊಟ್ಟು ಸಮಾಜದಲ್ಲಿ ಸಂಚಲನೆಯನ್ನುಂಟು ಮಾಡಿದ ಕಲಾಪಗಳಿಂದಾಗಿ ಸರ್ವಕಾಲಕ್ಕೂ ಮಾದರಿ–ಮೇಲ್ಪಂಕ್ತಿಯಾಗಿ ನಿಲ್ಲಬಲ್ಲಂತಹ ಅದ್ವಿತೀಯ ಉಜಿರೆ ಸಮ್ಮೇಳನದ ರೂವಾರಿ ಶ್ರೀ ಸದಾನಂದಜಿ. ಅವ್ಯಾಹತ ಪ್ರವಾಸಗಳು, ಅವಿರತ ಕಾರ್ಯಕ್ರಮಗಳ ನಡುವೆಯೂ ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತಾ ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ನೂರಾರು ಕಾರ್ಯಕರ್ತರಲ್ಲಿ ಧ್ಯೇಯವಾದವನ್ನು ಪ್ರಖರಗೊಳಿಸುತ್ತಾ ತಮ್ಮ ಅದಮ್ಯ ಉತ್ಸಾಹವನ್ನು ಮೆರೆದವರು ಶ್ರೀ ಸದಾನಂದಜಿ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ನಮ್ಮ ನಡುವೆಯೇ ಇದ್ದ ಶ್ರೀ ಸದಾನಂದಜಿ ನಮ್ಮಲ್ಲನೇಕರಿಗೆ ಅಸಾಧ್ಯವಾಗಿ ಕಾಣುವಂತಹುದನ್ನು ಸಾಧ್ಯಮಾಡಿ ತೋರಿಸಿದರು. ತಾವು ಆರಿಸಿಕೊಂಡಿದ್ದ ಗುರಿಗಳ ಸಾಧನೆಯತ್ತ ದಾಪುಗಾಲು ಹಾಕುತ್ತಾ ನಮ್ಮ ಕಣ್ಣೆದುರೇ ತುಂಬ ಎತ್ತರಕ್ಕೆ ಬೆಳೆದ ಒಬ್ಬ ಅಸಾಧಾರಣ ವ್ಯಕ್ತಿ; ಅವರು.

ತಾರುಣ್ಯಾವಸ್ಥೆಯಲ್ಲಿದ್ದಾಗ ಮಾತ್ರವಲ್ಲ ತಮ್ಮ ಇಳಿ ವಯಸ್ಸಿನಲ್ಲೂ ಸಹ ದಣಿವಿಲ್ಲದವರಂತೆ ದುಡಿದ ಅಪರೂಪದ ಚೇತನ ಸದಾನಂದಜಿ. ಇತರರಿಗೆ ಅಸಾಧ್ಯವಾದದ್ದು ಅವರಿಗೆ ಸಾಧ್ಯವಾದದ್ದು ಹೇಗೆ? ಈ ಸಾಮರ್ಥ್ಯ ಅವರು ಗಳಿಸಿಕೊಂಡಿದ್ದು ಹೇಗೆ? ಇವುಗಳ ಚಿಂತನೆ ಅಗತ್ಯ.

ಸದಾನಂದಜಿಯವರ ಗಂಭೀರ ವದನ, ಸ್ವಲ್ಪ ನಿರ್ಲಿಪ್ತವೇ ಎನಿಸುವಂತಹ ಮುಖಭಾವಗಳಿಂದಾಗಿ ಅವರೊಬ್ಬ ಅಂತರ್ಮುಖಿ ಜೀವಿ ಎಂದು ಅನೇಕರು ಅಂದುಕೊಂಡಿದ್ದು ಉಂಟು. ಅದು ಸ್ವಲ್ಪಮಟ್ಟಿಗೆ ನಿಜವೂ ಹೌದು. ಆದರೆ ವ್ಯಕ್ತಿಯೊಬ್ಬ ಕೇವಲ ಅಂತರ್ಮುಖಿಯಷ್ಟೇ ಆಗಿದ್ದರೆ ವ್ಯಕ್ತಿತ್ವ ವಿಕಾಸಗೊಂಡರೂ ಸಹ ಅದರೊಂದಿಗೆ ಸ್ವಚಿಂತನೆಯೂ ಸ್ವಂತಿಕೆಯ ಮಮಕಾರವೂ ಮಿಳಿತವಾಗಿ; ಕೀರ್ತಿ–ಪ್ರತಿಷ್ಠೆಗಳು, ವೈಯಕ್ತಿಕ ಹಮ್ಮುಗಳಿಗೆ ಕುಮ್ಮಕ್ಕು ಕೊಡುವಂತಹ ಸಾಮಾಜಿಕ ಮನ್ನಣೆಗಳು – ಪುರಸ್ಕಾರಗಳು ಇವುಗಳಿಂದಾಗಿ; ಸಕಾರಾತ್ಮಕ ಬೆಳವಣಿಗೆಯ ಬದಲಿಗೆ ಆತನ ಸ್ವಂತಿಕೆಯು ಪ್ರಧಾನವಾಗುತ್ತಾ, ಹೋಗುವ ಅಪಾಯವಿದೆ.

ಆದರೆ ಸದಾನಂದಜಿ ಕೇವಲ ಅಂತರ್ಮುಖಿಯಷ್ಟೇ ಅಲ್ಲ, ಸಮಾಜಮುಖಿಯೂ ಆಗಿದ್ದರು. ಸಮಾಜ ಹಿತಚಿಂತನೆಯ ಬಗೆಗಿನ ಅಂತರ್ಮುಖಿ ಅವರು. ಸ್ವಚಿಂತನೆಯಷ್ಟರಲ್ಲೇ ತೊಡಗಿರುವ ವ್ಯಕ್ತಿಯ ಸಾಮರ್ಥ್ಯ ಅವನಲ್ಲಿರುವ ದೇಹಬಲ ಮತ್ತು ಬುದ್ಧಿಬಲಗಳಷ್ಟಕ್ಕೇ ಸೀಮಿತವಾಗಿರುತ್ತದೆ.

ಇದಕ್ಕೆ ಮನೋಬಲವನ್ನೂ ಸೇರಿಸಿ ಸ್ವಲ್ಪ ಮಟ್ಟಿಗೆ ಹಿಗ್ಗಿಸಬಹುದೇನೊ. ಇಷ್ಟಾದರೂ ಇದಕ್ಕೆ ಒಂದು ಮಿತಿ ಇರುತ್ತದೆ. ಆದರೆ ಸಮಾಜಮುಖಿಯೊಬ್ಬರು ಲೋಕಹಿತ ಬಹುಜನೋಪಯೋಗಿ ಚಿಂತನೆಗಳ ಕಾರ್ಯಗಳಲ್ಲಿ ತೊಡಗಿದಾಗ ಒದಗಿ ಬರುವ ಸಾಮರ್ಥ್ಯಕ್ಕೆ ಎಣೆಯೇ ಇಲ್ಲ. ಈ ಅಪರಿಮಿತ ಶಕ್ತಿಯಿಂದಾಗಿ ಅವರು ಮಹಾವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ. ವಿಜ್ಞಾನಿಯಿರಬಹುದು, ತಂತ್ರಜ್ಞನಾಗಿರಬಹುದು. ತತ್ವಜ್ಞಾನಿಯೇ ಇರಬಹುದು ಅಥವಾ ಸಾಮಾಜಿಕ ಕಾರ್ಯಕರ್ತನೇ ಇರಬಹುದು; ಈ ಎಲ್ಲರೂ ಅದ್ಭುತವಾದವುಗಳನ್ನು ಸಾಧಿಸಿ ಅಚ್ಚರಿಮೂಡಿಸುತ್ತಾರೆ.

ಮನುಷ್ಯ ಪ್ರಯತ್ನದೊಂದಿಗೆ ದೈವಸಹಾಯ ಎನ್ನುವ ಮಾತು ನಿಜವಾಗುವುದು ಇಲ್ಲಿಯೇ. ವೈಯಕ್ತಿಕ ನೆಲೆಯನ್ನು ಮೀರಿ ಸರ್ವಹಿತಾನ್ವೇಷಣೆಗೆ ಹೊರಟಾಗ ಅದು ದೈವೀಕಾರ್ಯವೇ ಆಗುತ್ತದೆ. ಸ್ವಾಭಾವಿಕವಾಗಿಯೇ ದೈವಸಹಾಯ ಒದಗುತ್ತದೆ. ಅನೇಕ ಮಹಾಪುರುಷರ ಸಾಧನೆಗಳನ್ನು ನೋಡಿದಾಗ ಇದು ನಿಜವೇ ಅನ್ನಿಸುತ್ತದೆ. ಒಬ್ಬ ವ್ಯಕ್ತಿ ಜೀವನವಿಡೀ ಹಗಲಿರಳು ಶ್ರಮಿಸಿದರೂ ಸಾಧ್ಯವಾಗದಂತಹ ಅದ್ಭುತ ಯಶಸ್ಸನ್ನು ಪಡೆಯಲು ಅವರು ಹೇಗೆ ಅದ್ಭುತವಾದ ಸಾಮರ್ಥ್ಯ ಗಳಿಸಿಕೊಂಡರು ಎನ್ನುವುದಕ್ಕೂ ಇದೇ ಉತ್ತರವೇ ಹೊರತು ಬೇರೆಯಿಲ್ಲ. ಚಿಂತನೆ ಉದಾತ್ತವಾದಾಗ, ದೃಷ್ಟಿ ವಿಶಾಲವಾದಾಗ, 'ನನ್ನದೇನೂ ಇಲ್ಲ, ಎಲ್ಲವೂ ನಿನ್ನದೇ' ಎಂಬ ತ್ಯಾಗ ಜೀವನವನ್ನೇ ಆರಿಸಿಕೊಂಡಾಗ ವ್ಯಕ್ತಿ ಎಂತಹ ಅಸಾಧ್ಯವಾದುದನ್ನೂ ಸಾಧಿಸಿ ತೋರಿಸಬಹುದು ಎನ್ನುವುದಕ್ಕೆ ಸದಾನಂದಜೀಯವರೇ ಜೀವಂತ ಉದಾಹರಣೆ. ಇಂತಹ ಶ್ರೀ ಸದಾನಂದಜಿ ನಮ್ಮೊಟ್ಟಿಗೇ ಇದ್ದರು ಎನ್ನುವುದು ನಮ್ಮ ಭಾಗ್ಯವಿಶೇಷ.

ಪ್ರತಿ ಆದರ್ಶವ್ಯಕ್ತಿಯ ಜೀವನವೂ ಒಂದೊಂದು ಸಂದೇಶ. ಹೀಗಾಗಿ ಶ್ರೀ ಸದಾನಂದಜಿಯವರ ಜೀವನದ ಸ್ಫೂರ್ತಿಪ್ರದ ಘಟ್ಟಗಳನ್ನು ಗುರುತಿಸುವ ಒಂದು ಸ್ಮೃತಿ ಸಂಚಿಕೆಯನ್ನು ಹೊರತರಲು ವಿಶ್ವ ಹಿಂದು ಪರಿಷತ್ತು ಉದ್ದೇಶಿಸಿತು. ಶ್ರೀ ಸದಾನಂದಜಿಯವರ ಸುದೀರ್ಘ ಸಂಘಜೀವನದಲ್ಲಿ ಅವರ ಜೊತೆಗೂಡಿ ಕೆಲಸ ಮಾಡಿದವರ ಪಟ್ಟಿ ದೊಡ್ಡದೇ ಇದೆ. ಅವರಲ್ಲಿ ಕೆಲವರನ್ನು ವಿನಂತಿಸಿಕೊಂಡು ಸದಾನಂದಜಿಯವರ ಬಗ್ಗೆ ಲೇಖನಗಳನ್ನು ಪಡೆದುಕೊಂಡಿದ್ದೇವೆ. ಆ ಲೇಖನಗಳ ಸಂಕಲನವೇ ಈ ಸ್ಮರಣ ಸಂಚಿಕೆ.

ಸದಾನಂದಜಿಯವರ ಬದುಕು, ಜೀವನ ದೃಷ್ಟಿಕೋನ, ಚಿಂತನೆಗಳು, ಕಾರ್ಯಶೈಲಿ, ಸಂಘಟನಾ ವೈಖರಿ, ಕಾರ್ಯಕ್ರಮಗಳ ಯೋಜನೆಗಳು, ಅವರು ಅವುಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ರೀತಿ – ಇವೆಲ್ಲವುಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳನ್ನು ಈ ಸ್ಮೃತಿ ಸಂಚಿಕೆ ಒಳಗೊಂಡಿದೆ. ಸದಾನಂದಜಿಯವರ ಅಂತರಂಗವನ್ನು ಅರಿತವರೇ ಈ ಲೇಖನಗಳ ಕರ್ತೃಗಳು. ಹೀಗಾಗಿ ಶಬ್ದಾಡಂಬರಗಳಿಂದ ಮುಕ್ತವಾದ ಅನುಭವ ಪಕ್ವತೆ ಮತ್ತು ವಿಚಾರ ಸ್ಪಷ್ಟತೆಗಳಿಂದ ಕೂಡಿದ ಪ್ರೌಢ ಲೇಖನಗಳನ್ನು ಇಲ್ಲಿ ಕಾಣಬಹುದು. ಸ್ವಾನುಭವ ಘಟನೆಗಳನ್ನೊಳಗೊಂಡಿರುವ ಈ ಸಂಚಿಕೆಯುದ್ದಕ್ಕೂ ಆತ್ಮೀಯತೆಯ ಸೊಗಡನ್ನು ಸವಿಯುತ್ತಾ ಹೋಗಬಹುದು. ವ್ಯಕ್ತಿಯ ವೈಭವೀಕರಣ ಇಲ್ಲಿ ಪ್ರಾಧಾನ್ಯವಾಗಿಲ್ಲ. ಆದರೆ ಸತ್ಯನಿಷ್ಠುರವಾದ ವಿಷಯ ವಿಶ್ಲೇಷಣೆಗಳಿಂದಾಗಿ ಈ ಲೇಖನಗಳು ಸತ್ವಪೂರ್ಣವಾಗಿದ್ದು ನಮಗೆ ಆಪ್ತವಾಗುತ್ತವೆ.

ಸದಾನಂದಜಿಯವರ ಬದುಕಿನ ಘಟನೆಗಳು ಕೆಲವೊಮ್ಮೆ ಪುನರುಕ್ತಿಯಾದಂತೆ ತೋರುತ್ತದೆ. ಆದರೆ ಆಯಾ ಲೇಖಕರ ಶೈಲಿಗನುಸಾರವಾಗಿ ನಿರೂಪಣೆಗೊಳ್ಳುವ ಈ ಘಟನೆಗಳು ವೈವಿಧ್ಯಮಯವಾಗಿ ತೋರುವುದೂ ಉಂಟು. ಆದರ್ಶಮಯ ಘಟನೆಗಳು, ಪುನರುಕ್ತಿಯಿಂದ ಮನದಲ್ಲಿ ಗಟ್ಟಿಯಾಗಿ ನಾಟಿಕೊಳ್ಳುವುದೂ ಅಪೇಕ್ಷಣೀಯವೆ.

ಸದಾನಂದಜಿಯವರ ಗುಣ–ಸ್ವಭಾವಗಳನ್ನು ಪರಿಚಯಿಸುವ, ವಿಶ್ಲೇಷಿಸುವ ಲೇಖನಗಳನ್ನೂ ಒಳಗೊಂಡಿರುವುದು ಈ ಸಂಚಿಕೆಯ ವಿಶೇಷ. ಸದಾನಂದಜಿ ತಮ್ಮ ಸ್ವಭಾವದಿಂದಾಗಿ ಮೊದಲ

ನೋಟಕ್ಕೆ ಒಂದು ರೀತಿಯ ಕಠೋರ ವ್ಯಕ್ತಿಯಾಗಿ ಕಂಡರೂ ಸಹ, ಅವರ ಗುಣವನ್ನರಿತವರು ಸದಾನಂದಜೀಯವರ ಈ ಸ್ವಭಾವವನ್ನು ಗೌಣವಾಗಿ ಕಂಡರು. ಸದಾನಂದಜಿಯವರ ಈ ಸ್ವಭಾವ ಕಠೋರತೆಯೂ ಕೆಲವು ಲೇಖನಗಳಲ್ಲಿ ಕಾಣಸಿಗುತ್ತವೆ. ಆಯಾ ಲೇಖನಗಳಲ್ಲಿ ಇದನ್ನು ಯಥಾವತ್ತಾಗಿ ಚಿತ್ರಿಸಲಾಗಿದೆ. ಒಂದು ರೀತಿಯ ವ್ಯಾಜನಿಂದಾ ಇದು!

**ಬೆಂಗಳೂರು**

**ಶ್ರೀ ಖರ ಸಂ. ಆಶ್ವಯುಜ, ಕೃಷ್ಣ ತೃತೀಯಾ**

**15.10.2011**



**ಡಾ॥ ಎಂ. ಶಿವಕುಮಾರಸ್ವಾಮಿ**

ಗೌರವ ಸಂಪಾದಕ

## ಒಂದು ವಿಚಾರದ ಹಲವು ಮುಖ



# ಸಮಗ್ರತೆ ಮೂಡಲಿ

**ಧರ್ಮಸ್ಥಳದಲ್ಲಿ ನಡೆದ ವಿಶ್ವ ಹಿಂದು ಪರಿಷದ್ ದ್ವಿತೀಯ ಪ್ರಾಂತ ಸಮ್ಮೇಳನದಲ್ಲಿ ಮಾಡಿದ ಪ್ರಾಸ್ತಾವಿಕ ಭಾಷಣದ ಭಾಗ**

**– ಸದಾನಂದ ಕಾಕಡೆ**

ಹಿಂದುಸಮಾಜದ ಸಂಘಟನೆಯ ದಿಕ್ಕಿನಲ್ಲಿ ಯಾವ ರೀತಿಯ ಪ್ರಗತಿ ಸಾಧಿಸಿದ್ದೇವೆ ಎಂಬ ಯಕ್ಷಪ್ರಶ್ನೆ ನಮ್ಮ ಮುಂದಿದೆ. ಹಿಂದೂ ಸಮಾಜದಲ್ಲಿ ಸ್ವಾಭಿಮಾನ ಉಂಟಾಗಬೇಕಾದರೆ ವಿವಿಧ ಹಳ್ಳಿಗಳಲ್ಲಿ ನಾವು ಏನೇನು ಸಾಧಿಸಲಿದ್ದೇವೆ ಎಂದು ತಿಳಿಯುವ ಅಗತ್ಯವಿದೆ.

ನಮ್ಮದು ಪ್ರಜಾಪ್ರಭುತ್ವ ಮಾದರಿಯ ಆಡಳಿತ ಪದ್ಧತಿ. ನಮ್ಮ ಮಂತ್ರಿಗಳು ಶಾಸಕರು ವಿವಿಧ ಜಾತಿ, ಕೋಮುಗಳ ಸಮ್ಮೇಳನದಲ್ಲಿ ಸಂತೋಷದಿಂದ ಪಾಲ್ಗೊಳ್ಳುತ್ತಾರೆ. ಆದರೆ ಇಡೀ ಹಿಂದೂ ಸಮಾಜದ ಸಮ್ಮೇಳನದಲ್ಲಿ ಭಾಗವಹಿಸಲು ಅವರಿಗೆ ಮುಜುಗರವಾಗುತ್ತದೆ. ಇದನ್ನು ಬದಲಿಸಿ, ಹಿಂದು ಸಮಾಜದ ಸಮ್ಮೇಳನದಲ್ಲಿ ಭಾಗವಹಿಸುವುದು ಹೆಮ್ಮೆಯ ಸಂಗತಿ ಎಂಬ ಅರಿವನ್ನು ಅವರಲ್ಲಿ ಮೂಡಿಸಲು ನಾವು ಯತ್ನಿಸಬೇಕು.

ಬರೀ ಘೋಷಣೆ ಕೂಗುತ್ತಾ ಸಮಾಜದ ಸಭೆಗಳಲ್ಲಿ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಸೇರಿದರೆ ಸಾಲದು; ಸ್ವಾಭಿಮಾನ–ಪ್ರತಿಷ್ಠೆ ಹೆಚ್ಚುವಂತೆ ಸಮಾಜದ ಸರ್ವ ಶಕ್ತಿಗಳನ್ನು ಕ್ರೋಡಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಧರ್ಮಶಕ್ತಿಯನ್ನು ಮಠಾಧೀಶರಿಂದ, ಮಾತೃಶಕ್ತಿಯನ್ನು ಮಾತೆಯರಿಂದ, ಧನಶಕ್ತಿಯನ್ನು ಧನವಂತರಿಂದ ಸೇವಾಶಕ್ತಿಯನ್ನು ವೈದ್ಯರಿಂದ, ಜ್ಞಾನಶಕ್ತಿಯನ್ನು ಅರ್ಚಕರು, ಶಿಕ್ಷಕರು, ಬೋಧಕರು, ಕೀರ್ತನಕಾರರು, ಹರಿದಾಸರಿಂದಲೂ ಹಾಗೆಯೇ ಉತ್ಪಾದನಶಕ್ತಿ, ಪ್ರಚಾರಶಕ್ತಿ ಇವನ್ನೆಲ್ಲಾ ಇಲ್ಲಿ ನಾವಿಂದು ಒಂದೆಡೆ ಸೇರಿಸಿದ್ದೇವೆ. ಈ ಶಕ್ತಿಗಳಿಂದ ಸಮಾಜಕ್ಕೆ ಏನಾಗಬೇಕಾಗಿದೆ ಎಂಬುದನ್ನು ಇಲ್ಲಿ ಸಮಾಲೋಚಿಸಬೇಕಾಗಿದೆ; ಯಾವ ರೀತಿಯ ಸಾಮಾಜಿಕ ಮನೋಭಾವಬೇಕೆಂಬುದನ್ನು ಚಿಂತಿಸಬೇಕಾಗಿದೆ.

ಸಮಾಜದ ನೇತಾರರು, ಮಠಾಧಿಪತಿಗಳು, ಸಮಾಜದ ದುಃಖಿಗಳ ನಿವಾರಣೆಗೆ ಮುಂದಾಗಬೇಕಾಗಿದೆ ಹಾಗೂ ಒಂದಾಗಬೇಕಾಗಿದೆ. ಧನಿಕರು, ಶಿಕ್ಷಕರು, ಹರಿದಾಸರು ಮೊದಲಾದವರಿಗೆಲ್ಲಾ ಸಾಮಾಜಿಕ ದೃಷ್ಟಿಕೋನ ನೀಡಬೇಕಾಗಿದೆ. ಧಾರ್ಮಿಕ ಶ್ರದ್ಧೆ, ಹಾಗೂ ಸಾಮಾಜಿಕ ಸೇವಾ ಮನೋಭಾವದಿಂದ ಈ ಸರ್ವಶಕ್ತಿಗಳ ಮಿಲನವಾಗಬೇಕಾಗಿದೆ. ಈ ಪವಿತ್ರ ತಾಣದ ನೇತ್ರಾವತಿಯ ಜಲದಲ್ಲಿ ನೇತ್ರವನ್ನು ತೊಳೆದು ನವ ದೃಷ್ಟಿ ಪಡೆಯಬೇಕಾಗಿದೆ, ನೀಡಬೇಕಾಗಿದೆ.

ಹಿಂದೂ ಧರ್ಮಸಮನ್ವಯಕ್ಕೆ ಧರ್ಮಸ್ಥಳವೇ ಅತ್ಯುತ್ತಮ ನಿದರ್ಶನ. ಇಲ್ಲಿನ ಅಧಿದೇವತೆ ಶಿವ. ಧರ್ಮದರ್ಶಿಗಳು ಜೈನರು. ಅರ್ಚಕರು ವೈಷ್ಣವರು. ಇಂತಹ ಸಮನ್ವಯ, ಸಮಾನತೆ, ಉದಾರತೆ ಹಿಂದೂ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ನೆಲೆನಿಲ್ಲಬೇಕಾದರೆ ಎಲ್ಲರೂ ಒಂದೆಡೆ ಸೇರಿ ಚಿಂತನೆ ನಡೆಸಬೇಕು. ಎಲ್ಲರೂ ಸರ್ವಸಂಗ ಪರಿತ್ಯಾಗಿಗಳಾಗಿ ಸನ್ಯಾಸಿಗಳಾಗಿ ಸಮಾಜ ಸೇವೆ ಮಾಡಬೇಕಾಗಿಲ್ಲ. ವೈಯಕ್ತಿಕ ಜೀವನದಲ್ಲಿ ಅಂದರೆ ನಮ್ಮ ಮನೆ, ಗ್ರಾಮ, ಕ್ಷೇತ್ರಗಳಲ್ಲಿ ಸಮನ್ವಯತೆಯನ್ನು ಆಚರಿಸಲು ಕಲಿಯುವುದು ಮೊದಲಾಗಬೇಕು.

ಹಿಂದೂ ಸಮಾಜದಿಂದ ಅಸ್ಪೃಶ್ಯತೆ ಎಂಬ ಕಳಂಕವನ್ನು ತೊಡೆದುಹಾಕುತ್ತೇವೆಂದು ಪ್ರತಿಜ್ಞೆ ತಳೆಯಬೇಕು. ಈ ಸಮಾಜದಿಂದ ಯಾರೂ ಹೊರಹೋಗದಂತೆ ಹಾಗೂ ಈಗಾಗಲೇ ಅನ್ಯಾನ್ಯ ಕಾರಣಗಳಿಂದ ನಮ್ಮನ್ನಗಲಿದ ಬಂಧುಗಳು ಮರಳಿ ಮಾತೃಧರ್ಮಕ್ಕೆ ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಬರುವಂತಹ ವಾತಾವರಣ ನಿರ್ಮಾಣವಾಗಬೇಕು. ಈ ಹಿಂದೆ ಸುಮಾರು ಮೂವತ್ತು – ನಲ್ವತ್ತು ಮಂದಿ ಸ್ಮೃತಿಕಾರರು ಈ ದೇಶದಲ್ಲಿ ಸಂದರು. ಅಂತೆಯೇ ಹಿಂದೂ ಸಮಾಜದ ರಕ್ಷಣೆ, ಪೋಷಣೆಗಾಗಿ ಈಗ ಸಮಕಾಲೀನ ನವ ಸ್ಮೃತಿಕಾರರ ನಿರ್ಮಾಣವಾಗಬೇಕಾಗಿದೆ. ನಮ್ಮ ತತ್ವ ಜ್ಞಾನವು ದೈನಂದಿನ ನಡವಳಿಕೆಯಲ್ಲಿ ಬರಲು ಇದು ಅಗತ್ಯ ಹಾಗೂ ಅನಿವಾರ್ಯ.

## ಜೊತೆ ಜೊತೆಯಲ್ಲಿ











# 'ಸದಾ'

–ಎಂ.ಎನ್. ವ್ಯಾಸರಾವ್, ಬೆಂಗಳೂರು
ಖ್ಯಾತ ಕವಿಗಳು, ಲೇಖಕರು

–1–

ಆನಂದ ಹುಟ್ಟುವುದು ಅಂತರಾಳದಿಂದ
ಎದುರು ನೋಟದಿಂದ;
ಕಂಡ ದೃಶ್ಯದಿಂದ; ತ್ಯಾಗದಿಂದ
ತೃಪ್ತಿಯಿಂದ
ಮುಖವಾಡವಿಲ್ಲದ ಮುಖದಿಂದ!
ಅದು ಸದಾನಂದ

ಹುಟ್ಟಿನಿಂದಲೇ ಪಡೆದುಕೊಂಡ ಮೈಕಟ್ಟು
ಎಲ್ಲರಿಗೂ ಅಚ್ಚುಮೆಚ್ಚು
ಎಡ ಬಲದಲಿ ಎಂಟು ಜನ
ಒಡಹುಟ್ಟಿದವರು
ಮುಂದೊಂದು ದಿನ ಮಹಾಸಮ್ಮೇಳನದಲ್ಲಿ
ನೇಪಾಳ ಮಹಾರಾಜರ ಜೊತೆ ನಿಂತಾಗ
ಎಲ್ಲರೂ ಮೂಕ! ಒಳಗೊಳಗೆ ಎದ್ದ
ಪ್ರಶ್ನೆ: "ಈ ಮಹಾರಾಜ ಯಾರು"?

ಮರಾಠಿ, ಇತಿಹಾಸದ ಜೊತೆಗೆ
ಮಹಾಪುರುಷರ
ಸಾಹಸ ಒಳಗೆ ಹುತ್ತಗಟ್ಟಿದ ಹಾಗೆ;
ಪುರಾಣ ಕಾವ್ಯಗಳ ಆಕರ್ಷಣೆ
ಸಂತರ ಅಭಂಗ–ವಚನಗಳ ವಿಶ್ಲೇಷಣೆ
ಭಗವದ್ಗೀತೆಯ ವಿಚಾರದಲ್ಲೇ ಅಡಗಿತ್ತು
ವೇದ ಉಪನಿಷತ್ತಿನ ಸಾರ!
ವ್ಯಕ್ತಿತ್ವ ವಿಕಸನಕ್ಕೆ ಅವಕಾಶ–ತೆರೆದಿತ್ತು
ವಿಶಾಲ ಆಕಾಶ!

– 2 –

ಕಟ್ಟುವುದು ಇಟ್ಟಿಗೆಯ ಕೆಲಸ!
ಕಟ್ಟಿಕೊಡುವುದು ಕಲೆಯ ಕೆಲಸ
ಕಟ್ಟಿ, ಕಟ್ಟಿಕೊಡುವ ಚಿತ್ತಕ್ಕೆ
ರಾಷ್ಟ್ರವೇ ಕಟ್ಟಡ!!
ನಿಂತ ನೀರಿನ ಮೇಲೆ ರಂಗೋಲಿ ಬಿಡಿಸುವ
ಮನಸಿಗೆ
ತಳಪಾಯದ ಅರಿವಿತ್ತು!
ಒಂದೊಂದು ಇಟ್ಟಿಗೆಯ ಸಂಗ
'ಸಂಘ' ಬಲವಾಯಿತು!
ಅದು ಅಚಲ ಎಂದು ಅರಿತ 'ಸದಾ'ಗೆ
ಸತ್ಸಂಗ ವಿಪುಲ

ನಾಡಾಡಿಯಂತೆ ನಾಡುಗಳ ಸುತ್ತಿ
ಆ ನಾಡವ್ಯಕ್ತಿಯಾದ 'ಸದಾ'
ಸಂಘ ಸ್ಪರ್ಶದ ಮಾಂತ್ರಿಕತೆಯಲ್ಲಿ
ನಾಡು ತುಂಬಿಕೊಂಡಿತು
ತೆಕ್ಕೆಯೊಳಗೆ;

ರೆಕ್ಕೆ ಬಲಿತ ಹಕ್ಕಿಗೆ ಯಾವುದು ನೆಲೆ?
ಯಾವಯಾನ? ಇಡೀ ಹಿಂದೂಸ್ಥಾನ!

–3–

ಮೊಳೆವ ಕನಸು ಗರಿಯೊಡೆದಮೇಲೆ
ಆಕಾಶಕ್ಕೆ ಜಿಗಿತ
ಸ್ನೇಹಮಹಾಪೂರ

ಆಕಾಶದಲ್ಲಿ ಹಾರಿದರೂ ಹಕ್ಕಿ
ರೆಕ್ಕೆ ಮಡಚಲು ಬೇಕು ಗೂಡು
ಬೆಳಗಾವಿ ಬೆಂಗಳೂರು ಆಂಧ್ರ
ತಮಿಳುನಾಡು–ಕೈಚಾಚಿ ಕರೆದ
ತಾಯಂದಿರು!

ವಿಘಟಿಸುವ ಮನಸುಗಳಿಗೆ
ಸಂಘಟನೆಯ ಬೆಸುಗೆ
'ಸದಾ' ಬದುಕು ಹೀಗೆ ಬಗೆ ಬಗೆ
ಬಿಟ್ಟು ಕೊಡಬೇಕು
ಬಿಟ್ಟರೂ ಬಿಡದಂತಿರಬೇಕು
ಉಸಿರಾಟದ ಹಾಗೆ ನಿರಂತರ
'ಸದಾ' ವಿಶ್ವಾಸ!

ಜೀವಿ ಜೀವಿಗಳ ಸಂಬಂಧಕ್ಕೆ
ಗೆರೆ ಯಾವುದು
ಅದು ಬೆಸೆವ ಎಳೆಯಾವುದು!
'ಸದಾ' ಮುಗ್ಧಮನಸಿನ ಮುಕ್ತಜೀವಿ

ಇದ್ದಲ್ಲಿ ಬೆಳೆ–ಬೆಳಸು
ಸುತ್ತಲೂ ತಪೋವನದ ಸೊಗಸು
ಸಂಘ ಸಂಘಟನೆ ಪರಿಷತ್ತು
ಜೊತೆಗೆ ಧರ್ಮದ ಕವಾಯತು

ಹೀಗೆ ಒಂದಲ್ಲಾ ಒಂದರಲ್ಲಿ
ಒಡ್ಡಿಕೊಂಡ 'ಸದಾ'
ಪಂಚಭೂತದಂತೆ ಅನಿವಾರ್ಯ!

ಈಗಲೂ ಅಷ್ಟೇ!
ಇಲ್ಲೇ ನಮ್ಮೊಡನೆ ಯಾರಿಗೋ
ಸಲಹೆ ಕೊಡುತ್ತಿದ್ದಾರೆ
ಗೊಂದಲ ನಿವಾರಿಸುತ್ತಿದ್ದಾರೆ

## ಹೆಗಲು ಹೆಗಲು ಹೆಜ್ಜೆ ಹೆಜ್ಜೆ









# ಸಂಘಟಕ ಸದಾನಂದಜೀ

**–ವಿದ್ಯಾತ್ಮತೀರ್ಥ ಶ್ರೀಪಾದರು**
**ಪ್ರಯಾಗ**

**ಉಡುಪಿ ಶ್ರೀಫಲಿಮಾರು ಸಂಸ್ಥಾನ ಪ್ರಯಾಗ ಶಾಖಾಮಠದ ಪೂಜ್ಯಪ್ರಮುಖರು.**
**ಪೂರ್ವಾಶ್ರಮದಲ್ಲಿ ವಿಶ್ವ ಹಿಂದು ಪರಿಷದ್ ಪ್ರಾಂತೀಯ ಸಂಘಟನಾ ಕಾರ್ಯದರ್ಶಿಗಳು**

ಸದಾನಂದಜೀ ಮತ್ತು ಪರಿಷತ್ತಿನ ಸಂಘಟನೆ ಇವೆರಡೂ ಶಬ್ದಗಳ ಅರ್ಥವೂ ಒಂದೇ. ಧ್ವನಿಯೂ ಒಂದೇ. ಕರ್ನಾಟಕದ ಮಟ್ಟಿಗೆ ವಿಶ್ವ ಹಿಂದು ಪರಿಷತ್ತಿನ ಬಗೆಗೆ ವಿಚಾರ ಮಾಡುವುದೆಂದರೆ ಅದು ಸದಾನಂದಜೀ ಕುರಿತಾದ ವಿಚಾರವೇ.

ಕರ್ನಾಟಕದಲ್ಲಿ ಪರಿಷತ್ತಿನ ಚಟುವಟಿಕೆ ಆರಂಭ ಆದದ್ದು ವಿಶ್ವಹಿಂದು ಪರಿಷತ್ತಿನ ಆರಂಭದಿಂದಲೇ ಎಂದರೆ, 1964ರಿಂದಲೇ. ಅಂದಿನ ಮೈಸೂರಿನ ಮಹಾರಾಜರಾದ ಜಯಚಾಮರಾಜ ಒಡೆಯರು ಅಖಿಲಭಾರತ ವಿಶ್ವಹಿಂದು ಪರಿಷತ್ತಿನ ಅಧ್ಯಕ್ಷರಾದದ್ದರಿಂದ ಪರಿಷತ್ತಿನ ಕಾರ್ಯ ಕರ್ನಾಟಕದಲ್ಲಿ ಪ್ರಾರಂಭದಿಂದಲೇ ಮೊದಲಿಟ್ಟಿತು. ಮೊದಲ ವರ್ಷದಲ್ಲಿಯೇ ಪ್ರಾಂತೀಯ ಸಮಿತಿಯೊಂದಿಗೆ ಕೆಲ ಜಿಲ್ಲಾ ಸಮಿತಿಗಳೂ ಕಾರ್ಯಮಾಡಲು ಆರಂಭಿಸಿದ್ದು ಆಶ್ಚರ್ಯವೇನಲ್ಲ.

ಕೆಲ ಗೃಹಸ್ಥ ಕಾರ್ಯಕರ್ತರು ತಮ್ಮ ಬಿಡುವಿನ ಸಮಯದಲ್ಲಿ ಕೆಲಸ ಮಾಡತೊಡಗಿ ಪರಿಷತ್ತಿನ ಸಂಘಟನೆಯನ್ನು ಆರಂಭಿಸಿದರು. ಇದೇ ಕಾಲದಲ್ಲಿ 1969ರಲ್ಲಿ ವೈಭವದ ಮೊದಲನೆಯ ಪ್ರಾಂತೀಯ ಸಮ್ಮೇಲನ ನಡೆಯಿತು. ಆಗ ಪರಿಷತ್ತಿಗೆ ಕೃ ಸೂರ್ಯನಾರಾಯಣರಾಯರ ನೇತೃತ್ವ ದೊರಕಿದ್ದರಿಂದಲೇ ಅದು ಸಾಧ್ಯವಾಯಿತು. ಮೊದಲ ಸಮ್ಮೇಲನದ ಯಶಸ್ಸು, ಅಲ್ಲಿ ಕೈಕೊಂಡ ನಿರ್ಣಯಗಳನ್ನು ಅನುಷ್ಠಾನಿಸುವಲ್ಲಿ ಪೂಜ್ಯ ಪೇಜಾವರ ಸ್ವಾಮಿಗಳು ತೋರಿದ ಹುಮ್ಮಸ್ಸು; ಕರ್ನಾಟಕದ ವಿ.ಹಿಂ. ಪರಿಷತ್ತಿಗೆ ಕೆಲವು ಹೆಚ್ಚಿನ ಹೊಣೆಯನ್ನು ಹೇರಿಸಿತು. ಮೂಲಮಟ್ಟ (**Grass root**) ದಲ್ಲಿ ಸಂಘಟನೆ ಬೆಳೆಯುವ ಉತ್ಸಾಹವನ್ನು ತೋರಿಸುತ್ತಿದ್ದರೂ, ಜಿಲ್ಲಾಮಟ್ಟದಲ್ಲಿ ಗೃಹಸ್ಥ ಕಾರ್ಯಕರ್ತರ ಚಟುವಟಿಕೆ ಸಾಕಾಗಬಹುದಾದರೂ, ಪ್ರಾಂತಕೇಂದ್ರದಲ್ಲಿ ಬಲವಾದ ನೇತೃತ್ವದ ಅವಶ್ಯಕತೆ ಕಂಡುಬಂತು. ಪೂರ್ಣಕಾಲದ ಹಿರಿಯ ನಾಯಕರೊಬ್ಬರ ಹುಡುಕಾಟ ಇದಕ್ಕಾಗಿ ಆರಂಭವಾಯಿತು. ಆ ಹುಡುಕಾಟದ ಫಲವೇ ಶ್ರೀ ಸದಾನಂದ ಕಾಕಡೇ!

**ಸದಾನಂದಜೀ ಬೆಳೆದರು, ಕಾರ್ಯವೂ ಬೆಳೆಯಿತು**

ಸದಾನಂದಜೀಯವರನ್ನು ನಾನು ಮೊದಲ ಬಾರಿ ಕಂಡದ್ದು 1946ರ ಸಂಘ ಶಿಕ್ಷಾವರ್ಗ ಬೆಳಗಾವಿಯಲ್ಲಿ. ಅದೂ ಪ್ರಬಂಧಕರಾಗಿ. ಪ್ರಬಂಧಕರಿಗೂ ಶಿಕ್ಷಾರ್ಥಿಗಳಿಗೂ ಸಂ.ಶಿ.ವರ್ಗದಲ್ಲಿ

ಸದಾನಂದಜೀ ಮತ್ತು ಪರಿಷತ್ತಿನ ಸಂಘಟನೆ ಇವೆರಡೂ ಶಬ್ದಗಳ ಅರ್ಥವೂ ಒಂದೇ. ಧ್ವನಿಯೂ ಒಂದೇ. ಕರ್ನಾಟಕದ ಮಟ್ಟಿಗೆ ವಿಶ್ವ ಹಿಂದು ಪರಿಷತ್ತಿನ ಬಗೆಗೆ ವಿಚಾರ ಮಾಡುವುದೆಂದರೆ ಅದು ಸದಾನಂದಜೀ ಕುರಿತಾದ ವಿಚಾರವೇ.

ಕರ್ನಾಟಕದಲ್ಲಿ ಪರಿಷತ್ತಿನ ಚಟುವಟಿಕೆ ಆರಂಭ ಆದದ್ದು ವಿಶ್ವಹಿಂದು ಪರಿಷತ್ತಿನ ಆರಂಭದಿಂದಲೇ ಎಂದರೆ, 1964ರಿಂದಲೇ. ಅಂದಿನ ಮೈಸೂರಿನ ಮಹಾರಾಜರಾದ ಜಯಚಾಮರಾಜ ಒಡೆಯರು ಅಖಿಲಭಾರತ ವಿಶ್ವಹಿಂದು ಪರಿಷತ್ತಿನ ಅಧ್ಯಕ್ಷರಾದದ್ದರಿಂದ ಪರಿಷತ್ತಿನ ಕಾರ್ಯ ಕರ್ನಾಟಕದಲ್ಲಿ ಪ್ರಾರಂಭದಿಂದಲೇ ಮೊದಲಿಟ್ಟಿತು. ಮೊದಲ ವರ್ಷದಲ್ಲಿಯೇ ಪ್ರಾಂತೀಯ ಸಮಿತಿಯೊಂದಿಗೆ ಕೆಲ ಜಿಲ್ಲಾ ಸಮಿತಿಗಳೂ ಕಾರ್ಯಮಾಡಲು ಆರಂಭಿಸಿದ್ದು ಆಶ್ಚರ್ಯವೇನಲ್ಲ.

ಕೆಲ ಗೃಹಸ್ಥ ಕಾರ್ಯಕರ್ತರು ತಮ್ಮ ಬಿಡುವಿನ ಸಮಯದಲ್ಲಿ ಕೆಲಸ ಮಾಡತೊಡಗಿ ಪರಿಷತ್ತಿನ ಸಂಘಟನೆಯನ್ನು ಆರಂಭಿಸಿದರು. ಇದೇ ಕಾಲದಲ್ಲಿ 1969ರಲ್ಲಿ ವೈಭವದ ಮೊದಲನೆಯ ಪ್ರಾಂತೀಯ ಸಮ್ಮೇಲನ ನಡೆಯಿತು. ಆಗ ಪರಿಷತ್ತಿಗೆ ಕೃ ಸೂರ್ಯನಾರಾಯಣರಾಯರ ನೇತೃತ್ವ ದೊರಕಿದ್ದರಿಂದಲೇ ಅದು ಸಾಧ್ಯವಾಯಿತು. ಮೊದಲ ಸಮ್ಮೇಲನದ ಯಶಸ್ಸು, ಅಲ್ಲಿ ಕೈಕೊಂಡ ನಿರ್ಣಯಗಳನ್ನು ಅನುಷ್ಠಾನಿಸುವಲ್ಲಿ ಪೂಜ್ಯ ಪೇಜಾವರ ಸ್ವಾಮಿಗಳು ತೋರಿದ ಹುಮ್ಮಸ್ಸು; ಕರ್ನಾಟಕದ ವಿ.ಹಿಂ. ಪರಿಷತ್ತಿಗೆ ಕೆಲವು ಹೆಚ್ಚಿನ ಹೊಣೆಯನ್ನು ಹೇರಿಸಿತು. ಮೂಲಮಟ್ಟ (**Grass root)** ದಲ್ಲಿ ಸಂಘಟನೆ ಬೆಳೆಯುವ ಉತ್ಸಾಹವನ್ನು ತೋರಿಸುತ್ತಿದ್ದರೂ, ಜಿಲ್ಲಾಮಟ್ಟದಲ್ಲಿ ಗೃಹಸ್ಥ ಕಾರ್ಯಕರ್ತರ ಚಟುವಟಿಕೆ ಸಾಕಾಗಬಹುದಾದರೂ, ಪ್ರಾಂತಕೇಂದ್ರದಲ್ಲಿ ಬಲವಾದ ನೇತೃತ್ವದ ಅವಶ್ಯಕತೆ ಕಂಡುಬಂತು. ಪೂರ್ಣಕಾಲದ ಹಿರಿಯ ನಾಯಕರೊಬ್ಬರ ಹುಡುಕಾಟ ಇದಕ್ಕಾಗಿ ಆರಂಭವಾಯಿತು. ಆ ಹುಡುಕಾಟದ ಫಲವೇ ಶ್ರೀ ಸದಾನಂದ ಕಾಕಡೇ!

**ಸದಾನಂದಜೀ ಬೆಳೆದರು, ಕಾರ್ಯವೂ ಬೆಳೆಯಿತು**

ಸದಾನಂದಜೀಯವರನ್ನು ನಾನು ಮೊದಲ ಬಾರಿ ಕಂಡದ್ದು 1946ರ ಸಂಘ ಶಿಕ್ಷಾವರ್ಗ ಬೆಳಗಾವಿಯಲ್ಲಿ. ಅದೂ ಪ್ರಬಂಧಕರಾಗಿ. ಪ್ರಬಂಧಕರಿಗೂ ಶಿಕ್ಷಾರ್ಥಿಗಳಿಗೂ ಸಂ.ಶಿ.ವರ್ಗದಲ್ಲಿ ಅಷ್ಟಾಗಿ ಸಂಪರ್ಕ ಬರುವುದಿಲ್ಲ ಎಂದರೂ, ಅವರ ಸಮರ್ಪಿತ ವ್ಯಕ್ತಿತ್ವದಿಂದಾಗಿ ನಾನು ಆಕರ್ಷಿತನಾದೆ. ಬಹಳ ನಂತರ ತುಮಕೂರಿನ ವರ್ಗದಲ್ಲಿ ಪ್ರಥಮವರ್ಷದ ಶಿಕ್ಷಣಕ್ಕಾಗಿ ಅವರು ಬಂದರು. ಅದಕ್ಕೂ ಮೊದಲಿನ ವರ್ಗಗಳೆಲ್ಲ ಬೆಳಗಾವಿಯಲ್ಲೇ ಆಗುತ್ತಿದ್ದರಿಂದ ಆ ಕಾರ್ಯದಲ್ಲಿ ತೊಡಗಿದ್ದ ಅವರಿಗೆ ತಾನು ಶಿಕ್ಷಣ ಪಡೆಯಲು ಅವಕಾಶವೇ ದೊರಕಲಿಲ್ಲ. ಇಷ್ಟು ಸಮರ್ಪಿತ ಜೀವ ಅವರದ್ದು. ಆಗ ನಾನು ಧಾರವಾಡ ಜಿಲ್ಲಾ ಕಾರ್ಯದರ್ಶಿಯಾಗಿದ್ದೆ. ಪ್ರಾಂತೀಯ ಸಮಿತಿಯ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದೆ. ಪ್ರಾಂತೀಯ ಸಮಿತಿಯಲ್ಲಿ ಕೇವಲ ನಾನೊಬ್ಬನೇ ಸದಾನಂದಜೀಯುವರಿಗೆ ಪೂರ್ವಪರಿಚಯುದವನಾಗಿದ್ದೆ. ಅವರು ಧಾರವಾಡ ವಿಭಾಗಪ್ರಚಾರಕರಾಗಿದ್ದಾಗ ನಾನು ಜಿಲ್ಲಾ ಕಾರ್ಯವಾಹನಾಗಿದ್ದೆ. ಸಂಘಕ್ಕೆ ಸರ್ವ ಸಮರ್ಪಣೆಯನ್ನು ಮಾಡಿದ ಸದಾನಂದಜೀಯವರಿಗೆ ಒಂದೊಮ್ಮೆಗೆ ಪರಿಷತ್ತಿಗೆ ಬರುವುದು ಇಷ್ಟವಾಗಿರಲಿಕ್ಕಿಲ್ಲ ಎಂದು ಕಾಣುತ್ತದೆ. ಅದಕ್ಕೆ ಸರಿಯಾಗಿ ಪರಿಷತ್ತಿನ ಕಾರ್ಯಾಲಯ ಧರ್ಮಶ್ರೀ ಈಗಿನಂತೆ ರೂಪುಗೊಂಡಿರಲಿಲ್ಲ. ಕೇವಲ ಹಿಂದಿನ ಎರಡು ಕೋಣೆಗಳಿಗೆ ಕಟ್ಟಡ ಸೀಮಿತವಾಗಿತ್ತು. ಹಾಗಾಗಿ ಸದಾನಂದಜೀಯವರ ವಾಸ ಆಗ ಕೇಶವಕೃಪಾದಲ್ಲಿ. ಅವರು ಬೈಠಕಿಗಾಗಿ ಮಾತ್ರ ಧರ್ಮಶ್ರೀಗೆ

ಬರುತ್ತಿದ್ದರು. ಹೀಗೆ ಪ್ರಾರಂಭವಾದ ಅವರ ಪ್ರಾಂತ ಸಂಘಟನಾ ಕಾರ್ಯ ಮುಂದೆ 15.20 ವರ್ಷಗಳ ಅನಂತರ ಉಜಿರೆಯ ಅದ್ವಿತೀಯ ಪ್ರಾಂತೀಯ ಸಮ್ಮೇಳನ; ಲಕ್ಷಕ್ಕೂ ಮಿಕ್ಕಿ ಪ್ರತಿನಿಧಿಗಳು ಸೇರಿದ ಭವ್ಯ ಸಮಾರಂಭ ಇವೆರಡರ ಮಧ್ಯಭಾಗದ ಪರಿಷತ್ತಿನ ಕಾರ್ಯವಿಸ್ತಾರವೇ ಸದಾನಂದಜೀಯವರ ಸಂಘಟನಾ ಚಾತುರ್ಯ. ಪರಿಷತ್ತಿನ ಮೊದಲ ಪ್ರಾಂತ ಸಮ್ಮೇಳನ ಸದಾನಂದಜೀಯವರನ್ನು ಪರಿಷತ್ತಿಗೆ ಕಟ್ಟಿಹಾಕಿದರೆ ಎರಡನೆಯ ಪ್ರಾಂತೀಯ ಸಮ್ಮೇಳನದವರೆಗೆ ಸದಾನಂದಜೀ ಪರಿಷತ್ತನ್ನು ಕಟ್ಟಿ ಬೆಳೆಸಿದರು. ಅವರ ಸಂಘಟನೆಯ ಗುಟ್ಟು ಒಂದೇ! ಅವರು ಸಂಘಟನೆಗೆ ತಮ್ಮನ್ನು ತಾವೇ ಸಮರ್ಪಿಸಿಕೊಂಡವರು. ಅವರು ಅಬ ನೇತಾ ಕಾ ಇಚ್ಛಾಹೀ ಅಧಿಕಾರ ಕರೇ ಎಂಬ ಮಂತ್ರದಲ್ಲಿ ಬಲವಾಗಿ ವಿಶ್ವಾಸವನ್ನಿಟ್ಟವರು.

ಕಾರ್ಯಬೆಳೆಯುತ್ತದೆ. ಅದಕ್ಕೆ ತಕ್ಕ ಪ್ರಮಾಣದಲ್ಲಿ ಕಾರ್ಯಕರ್ತ ಬೆಳೆಯುತ್ತಿಲ್ಲ. ಆಗ ಪರಿಷತ್ತು ಕಾರ್ಯಕರ್ತರಿಗಾಗಿ ಸಂಘವನ್ನು ಅವಲಂಬಿಸಿಕೊಂಡಿರಬೇಕಾಗಿರುತ್ತಿತ್ತು. ಅದಕ್ಕಾಗಿ ನಮ್ಮದೇ ಕಾರ್ಯಕರ್ತರ ಪಡೆಯನ್ನು ಪ್ರಶಿಕ್ಷಣದ ಮೂಲಕ ನಿರ್ಮಾಣ ಮಾಡಬೇಕೆಂಬುದು ಪ್ರಾಂತ ಸಮಿತಿಯ ಅಭಿಪ್ರಾಯವಾಗಿತ್ತು. ಇದನ್ನು ಹಿರಿಯರ ಮುಂದೆ ಹೇಳಲು ಶಿಸ್ತಿನ ಸಿಪಾಯಿ ಸದಾನಂದಜೀ ಹಿಂಜರಿಯುತ್ತಿದ್ದರು. ನಾನು ಮಾನ್ಯ ಯಾದವರಾವಜೀಯವರ ಅನುಮತಿ ಪಡೆದ ಮೇಲೆಯೇ ಸದಾನಂದಜೀ ಆ ದಿಶೆಯಲ್ಲಿ ಕಾರ್ಯ ಪ್ರವೃತ್ತರಾದರು. ಆದರೆ ಸಿದ್ಧವಾದ ಕಾರ್ಯಕರ್ತರ ಪಡೆಗೆ ಒಳ್ಳೆಯ ನೇತೃತ್ವವನ್ನು ನೀಡಿ ಅವರನ್ನು ಉತ್ಸಾಹಗೊಳಿಸುವುದಲ್ಲದೇ ಅವರು ಸತತ ಕಾರ್ಯಮಗ್ನರಾಗಿರುವಂತೆ ನೋಡಿಕೊಳ್ಳಲು ಪ್ರಾಂತದ ತುಂಬ ಬಿರುಸಿನ ಪ್ರವಾಸ ಮಾಡುತ್ತಿದ್ದರು. ನಿನ್ನೆ ಬೀದರದಲ್ಲಿದ್ದವರು ಇಂದು ಮಡಿಕೇರಿಯಲ್ಲಿದ್ದರೆ ನಾಳೆ ಬೆಂಗಳೂರಿನ ಕೆಲಸ ಮುಗಿಸಿ ಬೆಳಗಾವಿನಲ್ಲಿ ಮಲಗುತ್ತಿದ್ದರು. ಅನಾರೋಗ್ಯ, ಜ್ವರ, ಆರಕ್ಷಣೆ ಇಲ್ಲದಿರುವಿಕೆ, ವಾಹನ ಕೈಕೊಡುವಿಕೆ ಇವಾವೂ ಅವರ ಪ್ರವಾಸಕ್ಕೆ ವಿಘ್ನಕಾರಿಗಳಾಗಿರಲಿಲ್ಲ. ಇವೆಲ್ಲವನ್ನೂ ಮೀರಿ ಕಾರ್ಯ ಮಾಡುವ ಮನೋಬಲ ಅವರದಾಗಿತ್ತು.

**ನಾನಲ್ಲ, ಎಲ್ಲವೂ ನೀವೇ**

ಕಾರ್ಯದ ಒತ್ತಡದಲ್ಲಿ ಅವರು ತಮ್ಮನ್ನೂ, ತಮ್ಮತನವನ್ನೂ, ಮರೆತು ಬಿಡುತ್ತಿದ್ದರು. ಅವರು ಸ್ವತಃ ಅತ್ಯಂತ ಸ್ವಾಭಿಮಾನಿ. ಒಮ್ಮೆ ನಿಶ್ಚಯಿಸಿದ್ದನ್ನು ಎಂದಿಗೂ ಬದಲಾಯಿಸದವರು. ಆದರೆ ಸಂಘಟನೆಗಾಗಿ ಅವರು ಇದೆಲ್ಲವನ್ನೂ ತೊರೆಯುತ್ತಿದ್ದರು. ಒಮ್ಮೆ ಪ್ರಾಂತ ಸಮಿತಿಯ ಸಭೆಯಲ್ಲಿ ನನಗೂ ಅವರಿಗೂ ಒಂದು ವಿಷಯದ ಬಗೆಗೆ ಭಿನ್ನಾಭಿಪ್ರಾಯ ಬಂತು. 'ನೀವು ಮಾತು ಬದಲಾಯಿಸುತ್ತಿದ್ದೀರಿ' ಎಂದು ನಾನಂದೆ. ಅದು ಅವರ ಅಭಿಮಾನವನ್ನು ಕೆರಳಿಸಿತು. ಅದನ್ನವರು ಒಪ್ಪಲಿಲ್ಲ. ಸಮಿತಿಯ ಸಭೆ ಮುಗಿಯುತ್ತಲೇ ಯಾರಿಗೂ ಹೇಳದೆ ನಾನು ನೇರ ಧಾರವಾಡಕ್ಕೇ ನಡೆದೆ. ತಿಂಗಳೆರಡು ಕಳೆದಿತ್ತು. ಆದಿನ ನಾನು ನನ್ನ ಹಳ್ಳಿಯ ಮನೆಗೆ ಹೋಗಿದ್ದೆ. ಹೊಲದಲ್ಲಿ ಕೆಲಸದಲ್ಲಿ ತೊಡಗಿದ್ದೆ. ಸದಾನಂದಜೀ (ಅವರಿಗೆ ಈ ಸ್ಥಳವೆಲ್ಲ ವಿಭಾಗ ಪ್ರಚಾರಕರಾಗಿದ್ದಾಗ ಪೂರ್ವಪರಿಚಿತ) ಅಲ್ಲಿಗೇ ಬಂದರು. ಬಂದವರಿಗೆ ಆತಿಥ್ಯ ನೀಡಲು ಮನೆಗೆ ಹೋಗುವಾ ಎಂದೆ. ಎಲ್ಲ ಪೂರೈಸಿಕೊಂಡು ಬಂದೆ. ಎಂದು ಅವರೆಂದರು. ಮಾತು ಮೌನಕ್ಕೆ ತಿರುಗಿತು. ನಾನು ಕಾರ್ಯರತನಾದೆ.

ಸಂಜೆ ಮನೆಗೆ ಮರಳಿದ್ದಾಯಿತು. ರಾತ್ರಿ ಭೋಜನಕ್ಕೇಳಿ ಎಂದರೆ ಹಸಿವಿಲ್ಲ ಎಂದರು. ಆಗಲೇ ನನಗೆ ಗೊತ್ತಾದದ್ದು ಮಧ್ಯಾಹ್ನ ಕೂಡ ಅವರು ನೀರನ್ನೂ ಸ್ವೀಕರಿಸದಿದ್ದದ್ದು. ನಾನು ಕೂಡಲೇ ಹೇಳಿದೆ “ಸದಾನಂದಜೀ ನಾನು ಪ್ರಾಂತೀಯ ಸಭೆಗೆ ಬರುತ್ತೇನೆ ನೀವು ಊಟಕ್ಕೇಳಿ” ಎಂದೆ. ನಗುನಗುತ್ತ ಭೋಜನ ಸಾಗಿತ್ತು. ಮೌನಕರಗಿ ನೀರಾಗಿ ಭೋಜನವೆಲ್ಲ ರಸಮಯವಾಗಿತ್ತು. ಕಾರ್ಯಕರ್ತನಿಗೆ ಸಂಘಟನೆಯೇ ಮುಖ್ಯ. ಇದು ಸದಾನಂದಜೀಯವರ ಧ್ಯೇಯವಾಗಿತ್ತು.

ಸದಾನಂದಜೀಯುವರ ಕೋಪದ ಕಾವು ತಟ್ಟದ ಕಾರ್ಯಕರ್ತರಾರೂ ಕರ್ನಾಟಕದಲ್ಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಅದು ಅವರ ಸ್ವಭಾವ. ಅವರು ಗುರುಗುಟ್ಟುತ್ತಿರುವುದು ನಮಗೆ ಮೋಜನ್ನುಂಟು ಮಾಡುತ್ತಿತ್ತು. ಆದರೆ ಸಂಘಟನೆಯ ಶ್ರೇಷ್ಠತೆಗಾಗಿ ಅವರು ತಮ್ಮ ಸಿಟ್ಟನ್ನು ನುಂಗಿಕೊಂಡು ತಾವೇ ಸಮಾಧಾನ ತಂದುಕೊಂಡ ಪ್ರಸಂಗಗಳುಂಟು. ಅವರು ಹುಬ್ಬುಗಂಟಿಕ್ಕದೇ ನಗುನಗುತ್ತ ಸಲಿಗೆಯಿಂದಿದ್ದರೆ ನಮಗೆ ಏನೋ ವಿಪತ್ತು ಕಾದಿದೆ ಎನ್ನಿಸುತ್ತಿತ್ತು. ಒಂದು ಬಾರಿ ಪೂರ್ಣಾವಧಿ ಕಾರ್ಯಕರ್ತನೊಬ್ಬ ತನ್ನದೇ ತಪ್ಪಿನಿಂದ ಬೇಸರಿಸಿ ಮನೆಗೆ ಹೊರಟವನು ಬೆಂಗಳೂರು ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ. ನಾನು ಧಾರವಾಡದಿಂದ ಬೆಂಗಳೂರಿಗೆ ಬಂದವ ಅವನನ್ನು ಕಂಡೆ. ನಡೆದ ಘಟನೆ ವಿವರಿಸಿದ. ಅವನಿಗೆ ಜ್ವರ ಬೇರೆ ಬಂದಿತ್ತು. ನಾನು ನನ್ನ ಶಾಲನ್ನು ಅವನಿಗೆ ಹೊದಿಸಿ ಧರ್ಮಶ್ರೀಗೆ ಮರಳಿ ಕರೆ ತಂದೆ. ಬಾಗಿಲಲ್ಲೇ ಸದಾನಂದಜೀ ದರ್ಶನವಾಯಿತು. ಅವನು ಒಳಬರಲು ಹಿಂಜರಿದ. ನಾನು ಕೈಹಿಡಿದು ಒಳಗೆ ಕರೆದೊಯ್ದೆ. ಸದಾನಂದಜೀ ಇದನ್ನು ಸಹಿಸಿಕೊಂಡದ್ದೇ ಆಶ್ಚರ್ಯ. ಅವರೆಂದೂ ಈ ವಿಷಯ ಚರ್ಚಿಸಲಿಲ್ಲ. ಸಂಘಟನೆಗಾಗಿ ಸಹಿಸಿಕೊಂಡರು. ಮಗನನ್ನು ಶಿಷ್ಯನನ್ನು ಅವನ ಎದುರಿಗೆ ಹೊಗಳಬಾರದು ಎಂದು ಶಾಸ್ತ್ರ ಹೇಳುತ್ತದೆ. ಸದಾನಂದಜೀ ಇದನ್ನು ಸರಿಯಾಗಿ ಅನುಸರಿಸಿಕೊಂಡು ಬಂದವರು. ಯಾರಾದರೂ ಪೂರ್ಣ ಕಾಲಿಕ ಕಾರ್ಯಕರ್ತರು ನಿವೃತ್ತಿಯನ್ನು ಬಯಸಿದರೆ ಅವರು ಕೂಡಲೇ ಹೇಳುತ್ತಿದ್ದರು. “ಪಂಚಮುಖಿ ನಿಮ್ಮ ಶಾಲನ್ನು ಸ್ವಲ್ಪ ಇವರ ಮೇಲೆ ಹೊದಿಸಿರಿ” ಎಂದು. ಸಂಘಟನೆಯ ಲಾಭವೇ ಕಾರ್ಯಕರ್ತನ ಲಾಭ. ವ್ಯಕ್ತಿಗತ ಲಾಭ ಹಾನಿ, ಮಾನ ಮರ್ಯಾದೆ ಅವರಿಗೆ ಬೇರಿರಲಿಲ್ಲ,

**ಕಠೋರ ಕಾರ್ಯನಿಷ್ಠೆ**

ಶಿಲ್ಪಿ ಮೂರ್ತಿಯನ್ನು ರಚಿಸುವಾಗ ಬೇಡದ ಭಾಗಗಳನ್ನೆಲ್ಲ ಕೆತ್ತಿ ತೆಗೆಯುತ್ತಾನೆ. ಮೂರ್ತಿಕಾರ ಮೂರ್ತಿಯಲ್ಲಿರಬೇಕಾದದ್ದನ್ನು ಜೋಡಿಸಿ ಮೂರ್ತಿಗೆ ರೂಪಕೊಡುತ್ತಾನೆ. ಗುರು, ಬೇಡದ ದುರ್ಗುಣಗಳನ್ನು ದೂರಗೊಳಿಸುವುದರೊಂದಿಗೆ ಬೇಕಾದ ಸದ್ಗುಣಗಳನ್ನು ಅಭಿವೃದ್ಧಿಪಡಿಸುತ್ತಾನೆ. ಸದಾನಂದಜೀ ಸಾಮಾಜಿಕ ಕಾರ್ಯದಲ್ಲಿ ಕಾರ್ಯಕರ್ತರನ್ನು ರೂಪಿಸಿದ್ದು ಹೀಗೆ. ದುರ್ಗುಣಗಳ (ಅವರಿಗೆ ಅನಪೇಕ್ಷಿತಗಳೆಲ್ಲ ದುರ್ಗುಣಗಳು) ನಿವಾರಣೆಯನ್ನವರು ನಿಷ್ಠುರತೆಯಿಂದ ಮಾಡುತ್ತಿದ್ದರು. ಮೊದಲಿಗೆ ಅದು ಕಟುವಾಗಿ ಕಂಡರೂ ಕಾಲಾಂತರದಲ್ಲಿ ಅದು ಕಾರ್ಯಕರ್ತನಿಗೆ ಕಲ್ಯಾಣಕಾರಿಯಾಗಿರುತ್ತಿತ್ತು. ಕಾರ್ಯಕರ್ತನಿಗೆ ದೂರದಿಂದ ಕೇವಲ ಉಪದೇಶ ನೀಡದೇ ಅವನಿಗೆ ಕಾರ್ಯಕ್ಷೇತ್ರದಲ್ಲಿಯೇ ಬೆಂಬಲ ನೀಡುವುದು ಅವರ ಸ್ವಭಾವವಾಗಿತ್ತು. ಅವರು ಕೇವಲ ಉಪದೇಶ ನೀಡುತ್ತಿರಲಿಲ್ಲ. ತಾವು ಕಾರ್ಯವನ್ನು ಸ್ವತಃ ಮಾಡಿ ಅದರ ಕಷ್ಟಸುಖಗಳನ್ನು ತಿಳಿದು ನೋಡಿ ಆ ಮೇಲೆ ಬೇರೆಯವರಿಗೆ ಆ ಕಾರ್ಯ ಮುಂದುವರಿಸಲು ಹೇಳುತ್ತಿದ್ದರು. ಮಾಡಬೇಕಾದ ಸಕಲ

ಕಾರ್ಯಗಳ ವಿವರ ಅವರಲ್ಲಿರುತ್ತಿತ್ತು. ಯಾವ ಸಂಕೋಚವಿಲ್ಲದೇ ಆ ವಿವರಗಳನ್ನು ಅವರು ನೀಡುತ್ತಿದ್ದರು. ಹೀಗಾಗಿ ಸದಾನಂದಜೀಯವರ ಎದುರು ನಾವು ನಮ್ಮ ಕಾರ್ಯಸಾಧನೆಗಳನ್ನು ವಿವರಿಸುವದು, ತೋರಿಸುವುದು ಕಷ್ಟಕರವಾಗುತ್ತಿತ್ತು. ಅವರ ಎದುರು ನಮ್ಮ ಸಾಧನೆಗಳಿಗಿಂತ ಕೊರತೆಗಳೇ ಹೆಚ್ಚಾಗಿ ಕಂಡುಬರುತ್ತಿದ್ದವು. ಹೀಗಾಗಿ ಅನ್ಯರು ಭಲೇ ಎನ್ನಬಹುದು, ಸದಾನಂದಜೀ ಇಂದ ಶಹಭಾಸಗಿರಿ ಪಡೆಯುವುದು ಕಷ್ಟವಾಗಿತ್ತು.

ರಾಷ್ಟ್ರೋತ್ಥಾನ ಪರಿಷತ್ತಿನ ಕೇಶವ ಶಿಲ್ಪದಲ್ಲಿ ಪರಿಷತ್ತಿನ ಮೂರು ದಿನದ ಕಾರ್ಯಕ್ರಮ ನಡೆಯಲಿತ್ತು. ಅದರ ಹಿಂದಿನ ಎರಡೂ ದಿನ ಏಕಾದಶಿ ಇದ್ದು ನಾನು ನೀರನ್ನೂ ಕುಡಿಯದೇ ಉಪವಾಸವಿದ್ದೆ. ಕಾರ್ಯಕ್ರಮದ ಉದ್ಘಾಟನೆ ಬೆಳಗಿನ 8.30ಕ್ಕೆ ಇದ್ದದ್ದರಿಂದ ನನಗೆ ಪಾರಣೆ ಮಾಡಲು ಸಾಧ್ಯವಾಗಿರಲಿಲ್ಲ. ವೇದಿಕೆಗೆ ಅಂತಿಮರೂಪ ಕೊಡತೊಡಗಿದ್ದೆ. ಎರಡು ಹಂತದ (**two tier**) ವೇದಿಕೆಯ ರಚನೆ ಅದಾಗಿದ್ದು ನನ್ನ ಕಲ್ಪನೆಯ ಕೂಸಾಗಿತ್ತು. ಬೆಳಗಿನ ಏಳೂವರೆಗೇ ಸದಾನಂದಜೀ ಅವಸರಿಸತೊಡಗಿದ್ದರು ಪಕ್ಕದಲ್ಲಿದ್ದ ಶ್ರೀಮೋಹನಜೀ ಜೋಶಿಯವರು ‘ಅವರ ಮನದಲ್ಲಿ ಏನೋ ಯೋಜನೆ ಇದೆ. ಅದನ್ನು ಮಾಡಲು ಬಿಡಿ’ ಎಂದರು. ಆದರೆ ಸದಾನಂದಜೀಯವರಿಗೆ ಸಮಾಧಾನವಿರಲಿಲ್ಲ. ನಾನು ಸಮಯಕ್ಕೆ ಸರಿಯಾಗಿ ಕಾರ್ಯ ಪೂರೈಸಿದೆ. ವೇದಿಕೆಯಲ್ಲಿ ಆಸೀನರಾದ ಅಧ್ಯಕ್ಷರು, ಅಶೋಕಜೀ (ಅಂದು ಅಶೋಕಜೀ ಅಧ್ಯಕ್ಷರಾಗಿರಲಿಲ್ಲ)ಯವರ ಹತ್ತಿರ ಅನ್ಯ ಹಿರಿಯರಿಗೆ ತೊಂದರೆಯಾಗದಂತೆ ಹೋಗಲು ವ್ಯವಸ್ಥೆ ಇತ್ತು. ಅಶೋಕಜೀ ಈ ವ್ಯವಸ್ಥೆಯನ್ನು ಬಹಳವಾಗಿ ಹೊಗಳಿದರು. ಆದರೆ ಸದಾನಂದಜೀಗೆ ಅದರಲ್ಲಿ ಆರು ದೋಷಗಳು ಕಂಡವು. 2ನೇ ಅವಧಿಗೆ ಮೊದಲು ಬಿಡುವಿನ ಸಮಯದಲ್ಲಿ ಆ ದೋಷಗಳನ್ನು ದೂರಗೊಳಿಸಿದ ನಂತರವೇ ಅವರಿಗೆ ಸಮಾಧಾನವಾಯಿತು. ಆ ಮೇಲೆಯೇ ನಾನು ಎರಡು ದಿನಗಳ ಉಪವಾಸದ ನಂತರದ ಪಾರಣೆ ಮಾಡಲು ಸಾಧ್ಯವಾದದ್ದು. ಇದಾವುದೂ ಸದಾನಂದಜೀಯವರ ಮನವನ್ನು ಬದಲಿಸಲು ಸಾಧ್ಯವಾಗಲಿಲ್ಲ. ಮಾಡುವ ಕಾರ್ಯ ದೋಷದೂರವಾಗಿರಬೇಕು. ಅಂದರೇ ಕಾರ್ಯ ಮಾಡುವವಗೆ ಸಮಾಧಾನ.

**ಕಲಿಯುತ್ತಲೇ ಇದ್ದರು ಕೊನೆಯವರೆಗೆ**

ಸದಾನಂದಜೀ ಪರಿಷತ್ತಿನ ಕಾರ್ಯವನ್ನು ಆರಂಭ ಮಾಡಿದಾಗ ಪೂಜ್ಯ ಪೇಜಾವರ ಸ್ವಾಮಿಗಳು ಪರಿಷತ್ತಿನ ಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿದ್ದರು, ಶ್ರೀ ಯ.ಕೃ.ರಾಘವೇಂದ್ರರಾವ್, ಮತ್ತು ನಾನು ಸಂಸ್ಕೃತ ಭಾಷೆಯನ್ನು ಬಲ್ಲವರು. ಹಾಗಾಗಿ ಪರಿಷತ್ತಿನ ಚಟುವಟಿಕೆ, ಲೇಖನ ಪ್ರಕಾಶನಗಳಲ್ಲಿ ಸಂಸ್ಕೃತ ಪ್ರಭಾವ ಎದ್ದು ಕಾಣುತ್ತಿತ್ತು. ಸದಾನಂದಜೀಯವರಿಗೆ ಸಂಸ್ಕೃತ ಅಷ್ಟಾಗಿ ಬರುತ್ತಿರಲಿಲ್ಲ. ಅವರಿಗೆ ಈ ಕೊರತೆಯನ್ನು ಸಹಿಸಲು ಆಗಲಿಲ್ಲ. ಕಾರ್ಯಕರ್ತನ ಕೊರತೆ ಸಂಘಟನೆಗೆ ಅಡ್ಡಿಯಾಗಬಾರದು. ಅರ್ವತ್ತು ವರ್ಷಗಳನ್ನು ದಾಟಿದ ಸದಾನಂದಜೀ ಸಂಸ್ಕೃತವನ್ನು ಕಲಿತರು. ಕೇವಲ ಸಂಸ್ಕೃತ ಶಬ್ದಗಳನ್ನು ಗುರುತಿಸುವುದಷ್ಟೇ ಅಲ್ಲದೇ ಸಂಸ್ಕೃತ ವಾಕ್ಯಗಳನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಜ್ಞಾನವನ್ನು ಅವರು ಪಡೆದರು.

ನನ್ನನಂತೂ ಕಾರ್ಯಕರ್ತನಾಗಿ ರೂಪಿಸಿದ್ದು ಅವರೇ. ಸಮಯಕ್ಕೆ ಸರಿಯಾಗಿ ಕೆಲಸಮಾಡುವುದು, ಎಷ್ಟೇ ಕಷ್ಟಗಳನ್ನು ಎದುರಿಸಿಯೂ ಕಾರ್ಯಪೂರೈಸುವುದು ಇವು

ಸದಾನಂದಜೀಯವರಿಂದ ಕಲಿಯಬೇಕಾದ ಗುಣಗಳು ಕರ್ನಾಟಕ ರಥಯಾತ್ರೆಯ ಸಂದರ್ಭದಲ್ಲಿ ಅತ್ಯಂತ ಅನಾರೋಗ್ಯಕರ ಸ್ಥಿತಿಯಲ್ಲಿ ಹೋಗಿ ನಿರ್ವಹಿಸಲು ಸಾಧ್ಯವಾಗಿದ್ದು ಅವರ ಪ್ರೇರಣೆಯಿಂದಲೇ. ಆ ಸಮಯದಲ್ಲಿ ಅವರು ನೀಡಿದ ಬೆಂಬಲ ಅವಿಸ್ಮರಣೀಯ.

ಕಾರ್ಯವಿದ್ದಲ್ಲಿ ಸದಾನಂದಜಿ. ಅದು ಸಂಘದ್ದಿರಬಹುದು, ಪರಿಷತ್ತಿನದಂತೂ ಸರಿಯೇ. ಭಾ.ಜ.ಪ. ವಿದ್ಯಾರ್ಥಿ ಪರಿಷದ್ ಯಾವುದೂ ಸರಿಯೇ. ದೊಡ್ಡ ಕಾರ್ಯಕ್ರಮವಿದ್ದರೆ ಅದರಲ್ಲಿ ಸದಾನಂದಜೀಯ ಪಾತ್ರವಿದ್ದೇ ಇರುತ್ತಿತ್ತು. ಬೆಂಗಳೂರಿನಲ್ಲಿ ನಡೆದ ಹಿಂದು ಸಂಗಮದಲ್ಲಿಯ ಅವರ ಪಾತ್ರ ಇವತ್ತಿಗೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ದ್ವಿತೀಯ ಪ್ರಾಂತ ಸಮ್ಮೇಳನ ಅವರ ಸಂಘಟನಾ ಚಾತುರ್ಯದ ಚರಮಸೀಮೆ. ಆದ್ದರಿಂದಲೇ ಅದು ನಿಜವಾಗಿಯೂ ಅದ್ವಿತೀಯವು. ಅವು ಅವರ ವ್ಯಕ್ತಿತ್ವದಂತೆ ನ ಭೂತೋ ನ ಭವಿಷ್ಯತಿ. ಹೌದು ಸದಾನಂದಜೀಯಂತೆ ಇನ್ನೊಬ್ಬರಿಲ್ಲ.

## ಅಮೃತ ಮಂಥನದ ಮಂದರಾದ್ರಿ















# ನಮ್ಮ ದಾದಾನ ಸಮರ್ಪಿತ ಜೀವನ

**– ಮಧುಕರ ಕಾಕಡೆ ಬೆಳಗಾವಿ**

**ಸದಾನಂದಜಿಯವರ ಕಿರಿಯ ಸಹೋದರ. ಕರ್ನಾಟಕ ಲೋಕೋಪಯೋಗಿ ಇಲಾಖೆಯ ನಿವೃತ್ತ ಅಧಿಕಾರಿ.**

ಶ್ರೀ ಸದಾನಂದಜೀ ಕಾಕಡೆ ನಮ್ಮೆಲ್ಲರಿಗೆ ಹಿರಿಯರು. ನಾವು ನಾಲ್ವರು ಸಹೋದರರು, ಮತ್ತು ಒಂಭತ್ತು ಜನ ಸಹೋದರಿಯರು, ಅವರಿಗೆ ಕಿರಿಯರು. ನಾವೆಲ್ಲ ಅವರನ್ನು 'ದಾದಾ' ಎನ್ನುತ್ತಿದ್ದೆವು. ನಮ್ಮಣ್ಣ, ಚಿಕ್ಕಂದಿನಿಂದಲೂ ಶಾಲಾ ಶಿಕ್ಷಣದಲ್ಲಿ ಅತ್ಯಂತ ಬುದ್ಧಿವಂತ ಹಾಗೂ ಶಿಸ್ತುಪ್ರಿಯ ವಿದ್ಯಾರ್ಥಿಯೆಂದು ಪ್ರಸಿದ್ಧರಾಗಿದ್ದರು. ಆ ಕಾಲದಲ್ಲಿ ವಿಶೇಷವೆಂದರೆ ಅವರು ಏಳನೇ ತರಗತಿಯ ಮುಖ್ಯ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಶಿಷ್ಯವೇತನ ಪಡೆದಿದ್ದುದು.

ದಾದಾ ಒಬ್ಬ ಉತ್ತಮ ಚಿತ್ರಕಾರರಾಗಿ ಎಲ್ಲರಿಗೂ ಪರಿಚಿತರಾಗಿದ್ದರು. ಸುಮಾರು 1936–37ರಲ್ಲಿ ಮುಂಬಯಿಯ ಚಿತ್ರಕಲಾ ಪ್ರದರ್ಶನ ಒಂದರಲ್ಲಿ ಪ್ರದರ್ಶಿಸಲು 'ದಾದಾ' ರವರ ಚಿತ್ರಗಳನ್ನು ಆಹ್ವಾನಿಸಿದ್ದರು. ಪ್ರದರ್ಶಿತ ಚಿತ್ರಗಳಿಗೆ ಭಾರಿ ಪ್ರಶಂಸೆಯು ಸಿಕ್ಕಿತ್ತು. ದಾದಾರವರು ಅಲ್ಲಿಯ ಮಹಾವಿದ್ಯಾಲಯದ ಶಿಕ್ಷಣವೇತ್ತರ ವಾಸಸ್ಥಳದಲ್ಲಿ, ಸ್ವಾಮಿ ವಿವೇಕಾನಂದ ಹಾಗೂ ಡಾ. ಹೆಗಡೆವಾರರ ಚಿತ್ರಗಳನ್ನು ರಂಗೋಲಿಯಿಂದ ಚಿತ್ರಿಸಿದ್ದರು. ಈ ಚಿತ್ರಗಳು ಎಷ್ಟೊಂದು ಸುಂದರವಾಗಿದ್ದುವೆಂದರೆ ಶಹಾಪೂರ, ಬೆಳಗಾಂವ್‌ದಿಂದ ಈ ಚಿತ್ರಗಳನ್ನು ನೋಡಲೆಂದೇ ಬಂದವರು, ಅವನ್ನು ನೋಡಿ ಬಹುವಾಗಿ, ಮೆಚ್ಚಿದ್ದರು.

ಮನೆಯಲ್ಲಿದ್ದ ಧಾರ್ಮಿಕ ಹಾಗೂ ದೇಶಭಕ್ತಿಯ ಸಂಸ್ಕಾರಗಳಿಂದಾಗಿ, ಬಾಲ್ಯದಿಂದಲೇ ಅವರಲ್ಲಿ ದೇಶಭಕ್ತಿಯ ಆಸಕ್ತಿ ನಿರ್ಮಾಣವಾಯಿತು. ಶ್ರೀಯುತ ಗೋವಿಂದರಾವ್ ಮತಕರಿ ಯವರಿಂದ 'ದಾದಾ'ರವರು ಸಂಘದೊಂದಿಗೆ ತಮ್ಮ ಜೀವನವನ್ನು ಜೋಡಿಸಿದರೆನ್ನಬೇಕು. ಸಂಘದ ಸ್ವಯಂ ಸೇವಕರಾಗಿ ಅವರು ತಮ್ಮ ಸಂಪೂರ್ಣ ಜೀವನವನ್ನು ದೇಶಸೇವೆ ಮತ್ತು ಸಂಘ ಕಾರ್ಯಕ್ಕಾಗಿ ಸಮರ್ಪಿಸಿಕೊಳ್ಳಲು ನಿಶ್ಚಯಿಸಿದರು. ಕೊನೆಯ ತನಕ ಅದೇ ರೀತಿಯಲ್ಲಿ ನಡೆದರು. ಸ್ವರಕ್ಷೆಗಾಗಿ ದಂಡ ಚಲಾಯಿಸುವುದರಲ್ಲಿ ಕೂಡ, ಅವರದ್ದೇ ವಿಶೇಷ ಪರಿಣಿತಿ ಇದ್ದಿತ್ತು.

ಸಂಘಶಿಕ್ಷಾವರ್ಗದ ಶಿಕ್ಷಣದ ನಂತರ ಸ್ವಲ್ಪಕಾಲ ಅಂದರೆ ಸುಮಾರು 6 ತಿಂಗಳು ಅವರು ಸರಕಾರಿ ನೌಕರಿ ಮಾಡಿದರು. ನಂತರ ಕೆಲಸಕ್ಕೆ ರಾಜಿನಾಮೆ ಇತ್ತು, ತಮ್ಮ ಆರು ತಿಂಗಳ ಸಂಬಳವನ್ನು ತನಗಾಗಿ ಉಪಯೋಗಿಸದೆ, 'ಗುರುದಕ್ಷಿಣಾ' ಕಾರ್ಯಕ್ರಮದಲ್ಲಿ ಸಮರ್ಪಿಸಿದರು. ಸಂಘದ ಒಂದೊಂದಾಗಿ ಅನೇಕ ಹೊಣೆಗಾರಿಕೆಗಳು ಹೆಚ್ಚಿದಂತೆ ಬೆಳಗಾಂಗೆ ಹೋದರು. ಆ ಕಾರಣ ಅವರು ಮನೆಗೆ ಬರುವುದು ಕಡಿಮೆಯಾಯಿತು. ಆದರೂ ಸಮಯ ಸಿಕ್ಕಾಗ ಕುಟುಂಬದ ಪ್ರತಿಯೊಬ್ಬರ ಹಾಗೂ ಎಲ್ಲಾ ಸಂಬಂಧಿಕರ ಸಮಾಚಾರಗಳನ್ನು ವಿಚಾರಿಸಿಕೊಳ್ಳುತ್ತಾ; ಮನೆಯ ಆಗು–ಹೋಗುಗಳಲ್ಲಿ ಇದ್ದುದರಲ್ಲೇ ಸಮಯ ಸಾಧಿಸಿ ಉಪಸ್ಥಿತರಿರುತ್ತಿದ್ದರು. ಮನೆ ವಿಚಾರವಾಗಿ ಏನಾದರೂ ನಮ್ಮಲ್ಲಿ ಸಮಸ್ಯೆ ಇದ್ದಾಗ ನಮ್ಮೆಲ್ಲರಿಗೂ ಉತ್ತಮ ಮಾರ್ಗದರ್ಶನ ನೀಡುತ್ತಿದ್ದುದ್ದು ನಮ್ಮ ದಾದಾರವರೇ. 'ದಾದಾ' ರವರು ಇವತ್ತು ಅನಂತದಲ್ಲಿ ವಿಲೀನರಾಗಿ ವರ್ಷ ಕಳೆಯಿತು. ಅವರ ಅಗಣಿತ ನೆನಪುಗಳು ನಮ್ಮ ಸ್ಮರಣೆಯಲ್ಲಿ ಸದಾ ಇರುತ್ತವೆ. ಅವರ ಆತ್ಮಕ್ಕೆ ಸದ್ಗತಿ ದೊರಕಲೆಂದು ಈಶ ಚರಣಗಳಲ್ಲಿ ಪ್ರಾರ್ಥಿಸುತ್ತೇನೆ.

***ಮರಾಠಿ ಲೇಖನದ ಅನುವಾದ ಶ್ರೀಮತಿ ವಿಜಯಾವಿಷ್ಣು ಭಟ್**

# ಹಿಂದುತ್ವದ ಸೇನಾನಿ ಸದಾನಂದಜೀ

ಪೂರ್ವ ದಕ್ಷಿಣಾಂಚಲ ಕ್ಷೇತ್ರೀಯ ಪ್ರಚಾರಕರು. ಪ್ರಸಕ್ತ ಕುಟುಂಬ ಪ್ರಬೋಧಿನಿ ಆಯಾಮದ ಪ್ರವರ್ತಕರು

**– ನ. ಕೃಷ್ಣಪ್ಪ, ಕೇಶವಕೃಪಾ**

ಸದಾನಂದ ಕಾಕಡೆಯವರನ್ನು ನಾನು ನೋಡಿದ್ದು 1947ರ ಬೆಳಗಾಂನ ಸಂಘಶಿಕ್ಷಾವರ್ಗದಲ್ಲಿ. ದಕ್ಷಿಣ ಭಾರತದ ನಾಲ್ಕೂ ಪ್ರಾಂತಗಳಿಂದ ಬಂದಿದ್ದ 1300 ಶಿಕ್ಷಾರ್ಥಿಗಳಿದ್ದ ವರ್ಗ ಅದು. ಆ ಶಿಬಿರದಲ್ಲಿ ವ್ಯವಸ್ಥಾಪಕರಾಗಿ ಓಡಾಡುತ್ತಿದ್ದವರು ಸದಾನಂದಜೀ. ದಕ್ಷಿಣದ ನಾಲ್ಕೂ ಭಾಷೆಗಳ ಸ್ವಯಂಸೇವಕರ ಜೊತೆಗೆ ಮರಾಠಿ ಭಾಷೆ ಮಾತನಾಡುವವರು, ಹಿಂದಿ, ಇಂಗ್ಲಿಷ್, ಮಾತನಾಡುವವರೂ ಸೇರಿ ಅದೊಂದು ಅ.ಭಾ. ಸ್ವರೂಪ ಇದ್ದ ವರ್ಗವೆಂದರೆ ತಪ್ಪಾಗಲಾರದು.

ದಷ್ಟಪುಷ್ಟ ಶರೀರ, ಶರೀರದಿಂದ ರಕ್ತವೇ ಚಿಮ್ಮುವುದೇನೋ ಎಂಬಂತೆ ಕೆಂಪು ಕೆಂಪಾಗಿದ್ದರು ಸದಾನಂದಜಿ. ಆ ಶಿಬಿರದಲ್ಲಿ ಶಿಕ್ಷಕರಾಗಿ, ಅಧಿಕಾರಿಗಳಾಗಿದ್ದವರನ್ನು ಕಣ್ತುಂಬಿ ನೋಡುವುದೇ ನಮಗೆಲ್ಲ ಒಂದು ಆಶ್ಚರ್ಯದ ಸಂಗತಿ. ಒಲಂಪಿಕ್‌ನಲ್ಲಿ ಭಾಗವಹಿಸಿ ಬಂದಿದ್ದ ಅಜಾನುಬಾಹು ಬಂಡೋವಂತಕಾಣೆ, ಚಟುವಟಿಕೆಯಿಂದ ಪುಟಿಯುತ್ತಿದ್ದ ಜಗನ್ನಾಥರಾವ್ ಜೋಶಿ, ಗೋಪಾಳರಾವ್ ಬಾಕ್ರೆ, ಭಾವೂರಾವ್ ದೇಶಪಾಂಡೆ, ಬಾಳಕಾಳೆ ರಾಜಾಭಾಊ ವಾಕಣಕರ್ ಇತ್ಯಾದಿಯವರ ಜೊತೆಗೆ ಸದಾನಂದಜಿ ಕಾಕಡೆ ಎಂದರೆ ಈಗಲೂ ಮೈನವಿರೇಳುವ ವಾತಾವರಣ ಅದು. ಶಿಕ್ಷಾರ್ಥಿಗಳ ಕಡೆಯಿಂದ ಬರುತ್ತಿದ್ದ ನಾನಾ ಸಲಹೆ, ದೂರು, ಅಪೇಕ್ಷೆಗಳೆಲ್ಲವನ್ನೂ ಆಲಿಸುತ್ತಾ, ಆಗಲಿ ಮಾಡೋಣ ಎಂದು ಹೇಳುತ್ತಾ ಎಲ್ಲವನ್ನು ಸರಿತೂಗಿಸಲು ಯತ್ನಿಸುತ್ತಿದ್ದ ಅವರಿಗೆ ಆಗಿನ್ನೂ ಇಪ್ಪತ್ತೆರಡು ವರ್ಷ ಇದ್ದಿರಬಹುದು. ಆದರೆ ಶಿಬಿರದ ಎಲ್ಲ ವಿಭಾಗಗಳ ಹೊಣೆಯನ್ನೂ ಹೊತ್ತು ನಿರ್ವಹಿಸುತ್ತಿದ್ದ ಅವರ ಬಗೆಗೆ ಮನದಲ್ಲಿ ಆದರ ಭಾವ ಮೂಡಿದ್ದು ಆಶ್ಚರ್ಯವೇನಲ್ಲ.

**ಸಂಘರ್ಷ ಕಾಲದ ನೇತೃತ್ವ**

1948ನೇ ವರ್ಷ ಸಂಘದ ಜೀವನದಲ್ಲಿ ಅತ್ಯಂತ ಕರಾಳ ವರ್ಷ. ಮಹಾತ್ಮ ಗಾಂಧೀಜಿ ಅವರ ಕೊಲೆ ಮಾಡಿದವನು ಹಿಂದು ಎಂಬ ಕಾರಣದಿಂದ ಹಿಂದು ಸಂಘಟನೆ ಮಾಡುತ್ತಿರುವ ಸಂಘದ ಮೇಲೆ ಸುಳ್ಳು ಆಪಾದನೆ ಮಾಡಿ ಭಾವುಕ ಜನರೆಲ್ಲ ಸಂಘ, ಸಂಘದ ಸ್ವಯಂಸೇವಕರ ಮೇಲೆ ಹಲ್ಲೆ ಮಾಡುವಂತೆ ಸರ್ಕಾರದ ಪ್ರಮುಖರೇ ಕುಮ್ಮಕ್ಕು ಕೊಟ್ಟ ಆ ವ್ಯವಸ್ಥಿತ ಕುತಂತ್ರ ದೇಶದ ದುರದೃಷ್ಟ ಎಂದು ಹೇಳಬಹುದು. ಅಂದಿನ ದಿನಗಳಲ್ಲಿ ಗಾಂಧೀಜಿ ಅವರ ಹೆಸರು ಹೇಳುತ್ತಾ ರೊಚ್ಚಿಗೆದ್ದ ಜನರು ಬೆಳಗಾಂ ಕಾರ್ಯಾಲಯವನ್ನು ಸುಟ್ಟರು. ಬೆಳಗಾಂನಲ್ಲಿದ್ದ ಅತ್ಯಂತ ಹಿರಿಯ ವಕೀಲರು, ಪ್ರಾಂತ ಸಂಘಚಾಲಕ, ಶ್ರೀ ಅಪ್ಪಾಸಾಹೇಬ ಜಿಗಜಿನ್ನಿಯವರ ಮನೆಗೂ ನುಗ್ಗಿದರು. ವಯಸ್ಸಾಗಿ ಶರೀರ ದುರ್ಬಲವಾಗಿದ್ದ ಅವರನ್ನು ನೆಲಕ್ಕೆ ಕೆಡವಿ ದೊಣ್ಣೆಗಳಿಂದ ಹೊಡೆದು ಅವರನ್ನು ಕೊಲೆ ಮಾಡಲು ಯತ್ನಿಸಿದರು. ಆಗ ಅಲ್ಲೇ ಇದ್ದ ಸದಾನಂದಜಿ ನುಗ್ಗಿ ಬಂದು ಅಪ್ಪಾಸಾಹೇಬರ ಮೇಲೆ ಮಲಗಿ ಅವರನ್ನು ತಬ್ಬಿ ಹಿಡಿದರು. ಆ ಹುಚ್ಚು ಗುಂಪು ತಮ್ಮ ಸಾಮರ್ಥ್ಯವನ್ನೆಲ್ಲ ಉಪಯೋಗಿಸಿ

ದೊಣ್ಣೆಗಳಿಂದ ಬಡಿಯಿತು. ಆದರೆ ಯಾವ ಏಟೂ ಸದಾನಂದಜಿಯವರನ್ನು ಅಪ್ಪಾಸಾಹೇಬರಿಂದ ಬೇರೆ ಮಾಡಲಾಗಲಿಲ್ಲ. ಹೊಡೆದವರು ಸುಸ್ತಾಗಿ ಹೊರಟು ಹೋದರು. ಸದಾನಂದಜಿ ತಮ್ಮ ಶರೀರವನ್ನು ಪಣಕ್ಕೊಡ್ಡಿ ಪ್ರಾಂತ ಸಂಘಚಾಲಕರನ್ನು ಉಳಿಸಿಕೊಂಡರು.

ಅವರು ಬೆಳಗಾಂ ನಗರದ ಕಾರ್ಯವಾಹರಾಗಿದ್ದರು. ಅವರು ಹುಡುಕುತ್ತಿದ್ದುದೇ ಚುರುಕಾದ ತರುಣರನ್ನು, ತನ್ನಂತೆಯೇ ನಿಷ್ಠಾವಂತರಾಗುವವರನ್ನು. ಮುಂದೆ ಖ್ಯಾತನಾಮರಾದ ಶ್ರೀ ಜಗನ್ನಾಥರಾವ್ ಜೋಶಿಯವರೂ ಸದಾನಂದಜೀಯವರನ್ನು ತಮ್ಮ ಪ್ರೇರಕರೆಂದು ಹೇಳುತ್ತಿದ್ದರು. ಬಾಬೂರಾವ್ ದೇಸಾಯಿ, ಹರಿಭಾವು ವಝೆ ಇತ್ಯಾದಿಯವರೂ ಸದಾನಂದಜಿ ಅವರ ಜೊತೆಗೇ ಬೆಳೆದವರು. ಆಗಿನ ದಿನಗಳಲ್ಲಿ ಕರ್ನಾಟಕ ಪ್ರಾಂತಕ್ಕೆ ಬೆಳಗಾಂ ಕೇಂದ್ರವಾಗಿತ್ತು. ಪ್ರಾಂತ ಪ್ರಚಾರಕರಾಗಿದ್ದ ಮಾನ್ಯ ಶ್ರೀ ಯಾದವರಾವ್‌ಜಿಯವರ ಕೇಂದ್ರವೂ ಬೆಳಗಾಂ. ಹಾಗಾಗಿ ತೇಜಸ್ವಿ ತರುಣರ ತಂಡಗಳು ಬೆಳಗಾಂನ ವಿಶೇಷವಾಗಿತ್ತು. ಅವರೆಲ್ಲರ ನೆಚ್ಚಿನ ನೇತಾರ ಸದಾನಂದಜೀ.

ಕ್ರಮೇಣ ಅವರು ಪ್ರಚಾರಕರಾದರು. ಸಂಘ ಶಿಕ್ಷಾವರ್ಗಗಳಲ್ಲಿ ಅವರ ಭೇಟಿ ಸಹಜವಾಗಿ ಆಗುತ್ತಿತ್ತು. ಅವರದ್ದು ಬಹುಮುಖ ಪ್ರತಿಭೆ. ಸುಂದರವಾದ ಅಕ್ಷರಗಳು, ಚಿತ್ರಕಲೆ, ಸಂಗೀತ, ವಾಸ್ತು, ಜ್ಯೋತಿಷ್ಯ ಇತ್ಯಾದಿಗಳಲ್ಲೂ ಚತುರರು. ಹಾಗಾಗಿ ನಾನಾ ರೀತಿಯ ತರುಣರು ಅವರನ್ನು ಸುತ್ತಿರುತ್ತಿದ್ದರು. ಹಸ್ತ ಸಾಮುದ್ರಿಕವೂ ಅವರ ನೆಚ್ಚಿನ ಕಲೆ. ಇವೆಲ್ಲವುಗಳ ಮೂಲಕ ತರುಣರನ್ನು ಆಕರ್ಷಿಸಿ ಸಂಘಕಾರ್ಯಕ್ಕೆ ಜೋಡಿಸುತ್ತಿದ್ದರು. ಅವರು ಪ್ರಚಾರಕರಾಗಿ ಬಂದಂತೆ ಬಾಬೂರಾವ್ ದೇಸಾಯಿ, ಹರಿಭಾವೂ ವಝೆಯವರೂ ಪ್ರಚಾರಕರಾಗಿ ಹೊರಬಂದು ಈಗಲೂ ಕೆಲಸ ಮಾಡುತ್ತಿದ್ದಾರೆ.

**ತನ್ಮಯತೆ**

ಸಂಘಶಿಕ್ಷಾವರ್ಗಗಳಿಗೆ ಬರುವ ಪ್ರತಿ ಸ್ವಯಂಸೇವಕನನ್ನೂ ಪ್ರತ್ಯೇಕವಾಗಿ ಕೂರಿಸಿಕೊಂಡು ಅವನಿಗೆ ಪ್ರಾರ್ಥನೆಯ ಉಚ್ಚಾರ, ಹೇಳುವ ರೀತಿಗಳನ್ನು ವಿವರವಾಗಿ ತಿಳಿಸಿಕೊಡುವ ತಪಸ್ಸನ್ನು ಸದಾನಂದಜೀ ಅನೇಕ ವರ್ಷ ಮಾಡಿದರು. ಅವರಿಂದ ಪ್ರಾರ್ಥನೆ ಕಲಿತವರು ಸಾವಿರಾರು ಕಾರ್ಯಕರ್ತರು. ಸದಾನಂದಜಿ ಸಂಘ ಶಿಕ್ಷಾವರ್ಗದ ಬೌದ್ಧಿಕ ವಿಭಾಗದಲ್ಲಿ ಅನೇಕ ವರ್ಷ ಕೆಲಸ ಮಾಡಿದರು. ಆಗಿನ ದಿನಗಳಲ್ಲಿ ಪ.ಪೂ.ಗುರೂಜಿಯವರು ದೇಶದ ಎಲ್ಲ ವರ್ಗಗಳಿಗೂ ಬರುತ್ತಿದ್ದರು. ಮೂರು ದಿನಗಳು ಅವರ ಬೌದ್ಧಿಕ್ ನಡೆಯುತ್ತಿತ್ತು. ಅವರು ಹೇಳಿದ ಪ್ರತಿ ಶಬ್ದವೂ ತುಂಬ ಮಹತ್ತ್ವದ್ದು. ಅದನ್ನು ಹಾಗೆಯೇ ಸಂಗ್ರಹಿಸಿ ಬರೆದಿಡಬೇಕು. ಆಗಿನ್ನೂ ರೆಕಾರ್ಡರ್ ಬಂದಿರಲಿಲ್ಲ. ಒಬ್ಬ ವ್ಯಕ್ತಿ ಅವರ ಭಾಷಣವನ್ನು ಬರೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಅವರು ಹೇಳಿದ ಪ್ರತಿ ಶಬ್ದವೂ ಲಿಪಿಬದ್ಧವಾಗಬೇಕು ಎಂಬುದು ಎಲ್ಲರ ಆಶಯ. ಹಾಗಾಗಿ ವರದಿ ತೆಗೆದುಕೊಳ್ಳಲು ಸಂಘದ್ದೇ ಒಂದು ಪದ್ಧತಿ ರೂಪಿತವಾಯ್ತು.

ಐದಾರು ಮಂದಿ ಮಂಡಲಾಕಾರದಲ್ಲಿ ಕುಳಿತುಕೊಳ್ಳುವುದು. ಬೌದ್ಧಿಕ್ ಕೇಳುತ್ತಾ ಸರದಿಯಲ್ಲಿ ತಮಗೆ ನೆನಪಾಗುವಷ್ಟನ್ನೇ ಬರೆಯುವುದು. ಬರೆಯುವ ಮುನ್ನ ಪಕ್ಕದವನಿಗೆ 'ಇನ್ನು ನಿನ್ನದು' ಎಂಬಂತೆ ಒಂದು ಸನ್ನೆ ಮಾಡಿ ತಾನು ಕೇಳಿದಷ್ಟನ್ನು ಬರೆಯುವುದು. ಹೀಗೊಂದು ಪದ್ಧತಿ 'ಟಿಕ್ ಸಿಸ್ಟಮ್' ರೂಪಿತವಾಯ್ತು. ಅವರೆಲ್ಲ ಬರೆದುದನ್ನು ನಂತರ ಸದಾನಂದಜೀ ಓದಿ ಬೌದ್ಧಿಕ್ ವರದಿ ತಯಾರಿ ಮಾಡುತ್ತಿದ್ದರು. ಪೂರ್ಣ ಪಾಠ ಸಿಗುತ್ತಿತ್ತು. ಈ ವ್ಯವಸ್ಥೆಗೆ ಅವರೇ ಪ್ರಮುಖರು.

ಪ್ರಾರಂಭದ ದಿನಗಳಲ್ಲಿ ಕೆಲವರು 'ಟಿಕ್' ಕೊಡುವುದನ್ನು ಮರೆತು ಬರೆಯಲಾರಂಭಿಸುತ್ತಿದ್ದರು.

ಆಗೆಲ್ಲ ಸದಾನಂದಜಿ ಅವರ ಹದ್ದಿನ ಕಣ್ಣು ಕೆಲಸ ಮಾಡುತ್ತಿತ್ತು. ಅವರು ಸಂಬಂಧಿಸಿದವರಿಗೆ ನೇರವಾಗಿ 'ಟಿಕ್' ಕೊಟ್ಟು ಬರವಣಿಗೆ ಮುಂದುವರಿಯುವಂತೆ ಮಾಡುತ್ತಿದ್ದರು. ಕ್ರಮೇಣ ಆ ಪದ್ಧತಿ ಚೆನ್ನಾಗಿ ರೂಪುಗೊಂಡಿತು. ವರ್ಗಕ್ಕೆ ಬರುವ ಎಲ್ಲರಿಗೆ ಕುತೂಹಲ ನಿರ್ಮಿಸುತ್ತಿದ್ದ ವ್ಯವಸ್ಥೆ ಅದು. ಇದರಿಂದ ಪೂಜ್ಯ ಗುರೂಜಿಯವರ ಪ್ರತಿ ಶಬ್ದವೂ ವರದಿಯಾಗುತ್ತಿದ್ದುದು ಅನುಭವ. ರೆಕಾರ್ಡರ್ ಬಂದ ನಂತರ ಈ ಪದ್ಧತಿ ಅಗತ್ಯವೆನಿಸಲಿಲ್ಲ.

**ಸವಾಲುಗಳಿಂದ ರೂಪುಗೊಂಡ ವ್ಯಕ್ತಿತ್ವ**

ಕ್ರಮೇಣ ಸದಾನಂದಜಿ ಗುಲ್ಬರ್ಗಾ ವಿಭಾಗಕ್ಕೆ ಪ್ರಚಾರಕರಾದರು. ಹಿಂದುತ್ವಕ್ಕೆ ಸವಾಲಾಗಿದ್ದ ಬಹು ಕಠಿಣ ಪ್ರದೇಶ ಅದು. ನಿಜಾಮನ ಆಳ್ವಿಕೆಯಿಂದ ಆಗ ತಾನೇ ಹೊರ ಬಂದಿದ್ದ ಪ್ರದೇಶ. ಮೂಲಭೂತ ಸೌಕರ್ಯಗಳೇ ಇಲ್ಲದ, ಮರಗಳ ಕೆಳಗೇ ಮದುವೆಯನ್ನು ನಡೆಸಬೇಕಾಗಿದ್ದ ದಿನಗಳವು. ಸಂಘಕಾರ್ಯ ಮಾಡುವಾಗ ತಮ್ಮ ಉತ್ಸಾಹವನ್ನು ಉಳಿಸಿಕೊಂಡು, ಜೊತೆಯ ಪ್ರಚಾರಕರ ಹುಮ್ಮಸ್ಸನ್ನೂ ಕಾಪಾಡುತ್ತಾ, ಸಾಧಾರಣ ಸ್ವಯಂಸೇವಕರಲ್ಲಿ ದೇಶಭಕ್ತಿ, ಸಮಾಜಕ್ಕಾಗಿ ದುಡಿಯುವ ನಿಷ್ಠೆಯನ್ನು ನಿರ್ಮಿಸಬೇಕು. ಸದಾನಂದಜಿ ತಮ್ಮ ನಿರಂತರ ಓಡಾಟ, ಮನೆಗಳ ಸಂಪರ್ಕ, ಆತ್ಮೀಯ ನಡವಳಿಕೆಗಳಿಂದ ನೂರಾರು ಮನೆಗಳನ್ನು ಸಂಘದ ಮನೆಗಳಾಗಿ ಪರಿವರ್ತಿಸಿದರು. ನಿಷ್ಠಾವಂತ ಕಾರ್ಯಕರ್ತರು ಪ್ರತಿ ಊರಲ್ಲೂ ರೂಪುಗೊಂಡರು. ಬ್ರಜಪಾಲಸಿಂಗ್, ಕಾಲಿದಾಸರಾವ್ ದೇಶಮುಖ ವಕೀಲರು, ಝುರಣಪ್ಪ, ನಾರಾಯಣರಾವ್ ತಾಳಿಕೋಟೆ, ರಘೋತ್ತಮರಾವ್ ವಕೀಲರು, ಲೌಖಂಡೆ, ಪಾಂಡುರಂಗ ಗಲಗಲಿ ಇತ್ಯಾದಿ ಅನೇಕ ಸಹಕಾರಿಗಳು ಅವರೊಡನೆ ಬೆಳೆದು ಸಂಘದ ಆಧಾರಸ್ತಂಭಗಳಾದರು. ಕ್ರಮವಾಗಿ ಗುಲ್ಬರ್ಗಾ ವಿಭಾಗವೂ ಉಳಿದ ವಿಭಾಗಗಳಂತೆ ಶಕ್ತಿಶಾಲಿ ಆಯಿತು.

1965ರಲ್ಲಿ ವಿಶ್ವ ಹಿಂದೂ ಪರಿಷತ್ ಸ್ಥಾಪನೆಯಾಗಿ ವ್ಯಾಪಕವಾಗಿ ಬೆಳೆಯಲು ಆರಂಭಿಸಿತ್ತು. ಅದಕ್ಕೆ ಯೋಗ್ಯ ದಿಕ್ಕನ್ನು ನೀಡಬಲ್ಲ ನೇತೃತ್ವದ ಅವಶ್ಯಕತೆಯಿತ್ತು. ಹಾಗಾಗಿ ಸದಾನಂದಜಿಯವರನ್ನು ಪ್ರಾಂತದ ಸಂಘಟನಾ ಕಾರ್ಯದರ್ಶಿಯಾಗಿ ನೀಡಲಾಯಿತು. ಅಲ್ಲಿಂದ ಅವರ ವಿಕಾಸವು ಪ್ರಾಂತ ಕ್ಷೇತ್ರ ಹಾಗೂ ಅಖಿಲ ಭಾರತೀಯಮಟ್ಟದಲ್ಲಿ ವಿಸ್ತಾರವಾದುದು ಎಲ್ಲರಿಗೂ ತಿಳಿದಿರುವುದೇ.

1969ರ ಡಿಸೆಂಬರ್‌ನಲ್ಲಿ ಉಡುಪಿಯಲ್ಲಿ ನಡೆದ ವಿಶ್ವ ಹಿಂದೂ ಪರಿಷತ್‌ನ ಪ್ರಥಮ ಸಮ್ಮೇಳನ ಅಭೂತಪೂರ್ವ. ಎಲ್ಲರ ಕಲ್ಪನೆಗಳನ್ನು ಹುಸಿಗೊಳಿಸಿ ಹಿಂದುತ್ವಕ್ಕೆ ಸರ್ವಜನರ ಸಮರ್ಥನೆ ಇದೆ ಎಂಬುದನ್ನು ತೋರಿಸಿದ ಸಮ್ಮೇಳನ ಅದು. ತರುಣ ತರುಣಿಯರು, ಅಧ್ಯಾಪಕರು, ಉದ್ಯಮಿಗಳು, ಸಂನ್ಯಾಸಿಗಳು, ಪೀಠಾಧೀಶರು ಎಲ್ಲರೂ ಒಂದಾಗಿ 'ಹಿಂದವಃ ಸೋದರಾಸ್ಸರ್ವೇ' ಎಂದು ಸಾರಿದ ಕಾಲ ಅದು. ಪರಿಷತ್ತು ವೇಗವಾಗಿ ಬೆಳೆಯಬೇಕು. ಬೆಳವಣಿಗೆಗೆ ತಕ್ಕಂತೆ ಕಾರ್ಯಯೋಜನೆ, ಕಾರ್ಯಕರ್ತರ ನಿರ್ಮಾಣ, ಸಂಪನ್ಮೂಲಗಳ ಸಂಗ್ರಹಣೆ, ಪರಸ್ಪರ ಸಮನ್ವಯ, ಸೂಕ್ತ ನೇತೃತ್ವ ನಿರ್ಮಾಣ ಇತ್ಯಾದಿ ಹತ್ತು ಹಲವು ಮುಖದಲ್ಲಿ ವಿಸ್ತಾರವಾಗುತ್ತಿದ್ದ ಕಾರ್ಯಕ್ಕೆ ಶಕ್ತಿ ತುಂಬಿದವರು ಅನೇಕರು. ಅವರಿಗೆಲ್ಲ ಸ್ನೇಹಿತನಂತೆ, ಸೋದರನಂತೆ ಜೊತೆಗಿದ್ದು ಪ್ರೇರಿಸಿದವರು ಸದಾನಂದಜಿ.

ಪ್ರಾಂತದ ಕೇಂದ್ರ ಬೆಂಗಳೂರು. ಬೆಂಗಳೂರಿನಲ್ಲಿ ವಿಶ್ವ ಹಿಂದೂ ಪರಿಷತ್ ಕಾರ್ಯಾಲಯ ರೂಪುಗೊಂಡರೆ ವೇಗವಾಗಿ ಬೆಳೆಯುತ್ತಿರುವ ಕಾರ್ಯಕ್ಕೆ ಪ್ರಬಲ ಆಧಾರವಾಗುತ್ತದೆ. ಹಾಗೆಂದು ಸಹಕಾರಿಗಳ ಸಲಹೆಯಂತೆ ಬೆಂಗಳೂರು ಶಂಕರವನದಲ್ಲೆ ಶೃಂಗೇರಿ ಶ್ರೀಗಳವರಿಂದ ವಿಶ್ವ ಹಿಂದೂ ಪರಿಷತ್‌ಗಾಗಿ ಜಾಗವೊಂದನ್ನು ಪಡೆಯಲಾಯಿತು. ಶ್ರೀ ಶ್ರೀಗಳವರ ಅಪೇಕ್ಷೆಯಂತೆ ಬೇಗ ಅಲ್ಲಿ

ಕಟ್ಟಡ ನಿರ್ಮಿಸಿ ಕೆಲಸ ಕಾರ್ಯಗಳಿಗೆ ಅನುವು ಮಾಡಿಕೊಡಬೇಕು ಎಂಬ ಛಲದಿಂದ ಓಡಾಡಿ ನಿಗದಿತ ಸಮಯದೊಳಗೇ 'ಧರ್ಮಶ್ರೀ'ಯ ನಿರ್ಮಾಣವಾಯಿತು. ಕಟ್ಟಡದ ಪ್ರತಿ ಹಂತದಲ್ಲೂ ಸದಾನಂದಜಿ ಅವರ ಚಿಂತನೆಯ ಸ್ಪರ್ಶ ಆಗಿದೆ.

**ಇರಬೇಕು ಇಂತಹ ಜಿಗುಟು ಸ್ವಭಾವ**

ಯಾವ ಕೆಲಸವಾದರೂ ಹೀಗೇ ಆಗಬೇಕೆಂಬ ಜಿಗುಟು ಸ್ವಭಾವ ಸದಾನಂದಜಿಯವರದು. ಖರ್ಚು ಕಡಿಮೆ ಆಗಬೇಕು. ವ್ಯವಸ್ಥೆ ಉತ್ತಮವಾಗಿರಬೇಕು. ಇದೇ ಉತ್ತಮ ವ್ಯವಸ್ಥೆಯ ಲಕ್ಷಣ ಎಂದು ಬಾರಿ ಬಾರಿಗೆ ಹೇಳುತ್ತಿದ್ದರು. ಹೊಸ ಹೊಸ ಕಲ್ಪನೆಗಳು, ಯೋಚನೆಗಳು ಬಂದಂತೆ ಅವುಗಳು ಸಂಘಟನೆಗೆ ಉಪಯೋಗ ಆಗಲೇಬೇಕು. ಆದರೆ ನಮ್ಮ ಅಜ್ಞಾನದಿಂದಲೋ, ಧೋರಣೆಯಿಂದಲೋ ಅನಗತ್ಯ ಖರ್ಚು ಆಗಬಾರದು ಎಂಬ ಅವರ ದೃಷ್ಟಿ ಅನೇಕ ಕಾರ್ಯಕರ್ತರಿಗೆ ಈಗಲೂ ದಾರಿದೀಪವಾಗಿದೆ. ವಿಶ್ವ ಹಿಂದೂ ಪರಿಷತ್ ಕಾರ್ಯದೊಂದಿಗೇ ರೂಪುಗೊಂಡ ಕಾರ್ಯಕ್ರಮಗಳು, ಪ್ರಕಾಶನಗಳು, ಸಾಕ್ಷ್ಯಚಿತ್ರಗಳು, ಪ್ರದರ್ಶಿನಿಗಳು, ಸ್ಮರಣಿಕೆಗಳು ಇವೆಲ್ಲವುಗಳು ಅವರ ತೀಕ್ಷ್ಣ ದೃಷ್ಟಿಯಿಂದಾಗಿ ಉತ್ಕೃಷ್ಟವೆನ್ನಿಸಿವೆ.

ಕಾರ್ಯ ಬೆಳೆದಂತೆ ಸಮಾಜದ ಅಗತ್ಯವನ್ನನುಸರಿಸಿ ರೂಪುಗೊಂಡ ಧರ್ಮ ಸಂಸದ್, ಧರ್ಮಾಚಾರ್ಯರ ಸಭೆಗಳು, ಕಿರಿಯ ಸಂನ್ಯಾಸಿಗಳ ಪ್ರಶಿಕ್ಷಣ, ವಾನಪ್ರಸ್ಥಿ ಕಾರ್ಯಕರ್ತರ ಯೋಜನೆ, ಭಾರತ ಸಂಸ್ಕೃತಿ ಪರಿಚಯ ಪರೀಕ್ಷೆ ಇತ್ಯಾದಿಗಳೆಲ್ಲವೂ ಪ್ರಾಂತದ ಗಡಿ ದಾಟಿ ಅಖಿಲ ಭಾರತೀಯ ರೂಪ ಧರಿಸಿವೆ. ಕರ್ನಾಟಕದ ಕಾರ್ಯಕರ್ತರಿಗೆ ಯೋಗ್ಯತೆಗೆ ತಕ್ಕಂತೆ ಹೊಣೆ ನೀಡಿ ಅವರನ್ನು ಪ್ರೋತ್ಸಾಹಿಸಿ ಬೆಳೆಸುವುದರಲ್ಲೂ ಅವರ ಎಚ್ಚರಿಕೆ ಫಲ ನೀಡಿದೆ.

ಹೊಣೆ ಹೆಚ್ಚಿ ಅವರು ಅಖಿಲ ಭಾರತೀಯ ಕಾರ್ಯಕರ್ತರಾದ ಮೇಲೂ ಹೊಸ ಕೆಲಸ ಬಂದಾಗ ಅವುಗಳ ಕುರಿತು ನಾನಾ ಮುಖದಲ್ಲಿ ಚಿಂತಿಸಿ ವ್ಯಕ್ತಿ, ಕೆಲಸ, ಹಣ, ಪ್ರಚಾರ, ವ್ಯವಸ್ಥೆ, ಪರಿಣಾಮ ಇತ್ಯಾದಿ ಎಲ್ಲದರ ಬಗ್ಗೆ ಯೋಚಿಸಿ ಕಾರ್ಯಕರ್ತರ ಮನವೊಲಿಸಿ ಕೆಲಸ ಮಾಡಿಸುತ್ತಿದ್ದರು. ಏಕಾತ್ಮತಾಯಾತ್ರೆ, ಉಜ್ರೆಯಲ್ಲಾದ ಎರಡನೇ ಪ್ರಾಂತೀಯ ಅಧಿವೇಶನ, ನಾನಾ ಕಡೆಗಳಲ್ಲಾದ ಹಿಂದು ಸಮಾಜೋತ್ಸವಗಳು, ಇವೆಲ್ಲವುಗಳ ಹಿಂದೆ ಅವರ ನಿಖರ ಚಿಂತನೆ ಕೆಲಸ ಮಾಡಿವೆ. ಇವುಗಳ ಜೊತೆಗೆ ಅವರಿಗೆ ಸಾಹಿತ್ಯದಲ್ಲೂ ಆಸಕ್ತಿ. "ಹಿಂದು ಹಿಂದುತ್ವ ಹಿಂದುರಾಷ್ಟ್ರ" ಎಂಬ ಹೆಸರಿನ ಅವರೇ ಬರೆದ ಪುಸ್ತಕ ಎಲ್ಲ ಭಾಷೆಗಳಿಗೂ ಅನುವಾದವಾಗಿರುವುದು ಅದರ ಸತ್ತ್ವಕ್ಕೆ ಸಾಕ್ಷಿ. ಇದಲ್ಲದೇ ಅನೇಕ ಲೇಖನಗಳು, ಬೆಳಗಾಂನ ವೀರವಾಣಿಗೆಂದೇ ಸಿದ್ಧಪಡಿಸಿದ ಲೇಖನಗಳೂ ಹಲವಾರು ಇವೆ.

ಹೀಗೆ ಬಹುಮುಖೀ ಪ್ರತಿಭೆಯಿಂದ ಜೊತೆಗಾರರಿಗೆ ಸದಾ ಮೇಲ್ಪಂಕ್ತಿಯಾಗಿ, ಸೇನಾಪತಿಯಂತೆ ಬದುಕಿದವರು ಸದಾನಂದಜಿ. ವಯಸ್ಸಾಗಿ, ಶರೀರ ದುರ್ಬಲವಾದಾಗಲೂ ಅವರ ಚಿಂತನೆ ದುರ್ಬಲವಾಗಲಿಲ್ಲ. ಕಾರ್ಯದ ಕುರಿತಾದ ಚಿಂತನೆ ಮಸಕಾಗಲಿಲ್ಲ. ಅಂದಿನ ಅವರ ಕೊನೆಯ ದಿನಗಳಲ್ಲಿ ಅವರೊಡನೆಯೇ ಇದ್ದು ಅವರ ನೆರಳಾಗಿ ಸೇವೆ ಸಲ್ಲಿಸಿದವರು ಬಾಬೂರಾವ್ ದೇಸಾಯಿ. 90 ವರ್ಷದ ವೃದ್ಧನಿಗೆ 85 ವರ್ಷದ ತರುಣನ ಸೇವೆ! ಬಾಬೂರಾಯರಿಗೆ ಅವರ ಬಗೆಗಿದ್ದ ಶ್ರದ್ಧೆ ಅಂತಹುದು. ದಿನಗಳಲ್ಲ, ತಿಂಗಳಲ್ಲ, ವರ್ಷಗಳ ಕಾಲ ಅವರೊಡನೆಯೇ ಇದ್ದು ಅವರ ಶರೀರ ಮನಗಳಿಗೆ ಸಾಂತ್ವನ ನೀಡಿದರು. **ಆ ಸ್ನೇಹ ಅನುಪಮ, ಅದ್ವಿತೀಯ**. ಎಲ್ಲರಿಗೂ ಅಂತಹ ಸ್ನೇಹ, ಸ್ನೇಹಿತರು ಸಿಗಬೇಕು ಎಂಬ ಆಸೆಯಿರುತ್ತೆ. ಆದರೆ ಸದಾನಂದಜೀ ಅದನ್ನು ಗಳಿಸಿದರು. ಧನ್ಯ ಅವರ ಬಾಳು!

# ಆ ಸ್ನೇಹ ಅನುಪಮ ಅದ್ವಿತೀಯ



















# ವ್ಯಕ್ತಿ ಅಳಿಯಿತು ಪ್ರೇರಣೆ ಉಳಿಯಿತು

**– ಮೀನಾ ಬಾಮ್, ಖೋಪೋಲಿ**

**ವಿಶ್ವ ಹಿಂದು ಪರಿಷದ್ ಮಹಾರಾಷ್ಟ್ರ ಪ್ರಾಂತ ಪೂರ್ವ ಉಪಾಧ್ಯಕ್ಷೆ ನ್ಯಾಯವಾದಿ ಅಧಿವಕ್ತಾ ಪರಿಷತ್ತಿನಲ್ಲಿ ಸಕ್ರಿಯ ಕಾರ್ಯಕರ್ತೆ**

ಸುಮಾರು 20 ವರ್ಷಗಳ ಹಿಂದಿನ ಮಾತು. ಒಂದು ಕೇಂದ್ರೀಯ ಮಹಿಳಾ ಬೈಠಕ್‌ಗೆ ಹೋಗುವ ಅವಕಾಶ ನನಗೆ ಸಿಕ್ಕಿತ್ತು. ಮಾ॥ ಸದಾನಂದ ಕಾಕಡೆಯವರು ಆ ಸಮಯದಲ್ಲಿ ಕೇಂದ್ರೀಯ ಸಂಘಟನಾ ಕಾರ್ಯದರ್ಶಿಯಾಗಿದ್ದರು. ಅದಕ್ಕಿಂತ ಮೊದಲು ಅವರನ್ನು ದೂರದಿಂದ ನೋಡಿದ್ದೆ. ಗಂಭೀರ ಹಾಗೂ ಕಡಿಮೆ ಮಾತಿನ ಅವರನ್ನು ನೋಡಿ; ಪರಿಚಯಿಸಿಕೊಳ್ಳುವ ಧೈರ್ಯವನ್ನು ನಾನು ಮಾಡಿರಲಿಲ್ಲ. ಬೈಠಕ್‌ನ ಊಟದ ವಿರಾಮದ ಸಮಯದಲ್ಲಿ ಕೆಲವು ಕಾರ್ಯಕರ್ತೆಯರು ಅವರ ವ್ಯಕ್ತಿತ್ವದ ಪರಿಚಯವನ್ನು ನನಗೆ ಮಾಡಿದ ಮೇಲೆಯೇ ನಾನು ಅವರನ್ನು ಮಾತನಾಡಿಸಿದುದು. ಆಗಲೆ ಅವರ ಗಂಭೀರ, ಶುಷ್ಕ, ಭಯ ಹುಟ್ಟಿಸುವ ನಿಲುವಿನ ಹೊರತಾಗಿ ನನಗೆ ಅವರು ಸ್ನೇಹಶೀಲ ಸಹೃದಯವಂತಿಕೆಯ ವ್ಯಕ್ತಿತ್ವದವರೆಂದು ಅರಿವಾಯಿತು. ನನ್ನ ಮಟ್ಟಿಗೆ ಅವರು ಒಬ್ಬ ಹಿರಿಯ ಮಾರ್ಗದರ್ಶಿಗಳಾದುದು ಆನಂತರವೇ.

ನಾನು ರಾಯಗಡ ಜಿಲ್ಲೆಯ ಖೋಪೋಲಿಯವಳು ಎಂದು ಕೇಳಿದಾಕ್ಷಣ ಉತ್ಸುಕತೆಯಿಂದ ಅವರು ಖೋಪೋಲಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಕೇಳಿ ತಿಳಿದುಕೊಂಡರು. ಒಂದು ಸಾರಿ ಖೋಪೋಲಿ ಮತ್ತು ಖಂಡಾಲ ಮಧ್ಯ ದೇವೀ ದೇವಸ್ಥಾನ ಯಾವುದಾದರೂ ಇದೆಯೇ ಎಂದು ನನ್ನನ್ನು ಕೇಳಿದರು. ಆಗ ವಾಘಜಾಯಿ (ಹುಲಿಯಮ್ಮ) ದೇವಿಯ ಜಾಗೃತಸ್ಥಾನ ಮಂದಿರದ ಸ್ಮರಣೆ ನನಗಾಯಿತು. ಅವರಿಗೆ ಅದನ್ನು ವಿವರಿಸಿದೆ. ಆಗ ಅವರು ತಾನು ಅದೇ ಘಾಟಿಯಲ್ಲಿ ಪ್ರವಾಸ ಮಾಡುವಾಗ ನಿದ್ದೆಯ ಮಂಪರಿನಲ್ಲಿ ದೇವಿಯ ದರ್ಶನ ವಾದ ಘಟನೆಯನ್ನು ಹೇಳಿದರು. ಅದಾದನಂತರ ಅವರು ಜೂನ್ 14 ರಂದು ತಮ್ಮ ಜನ್ಮದಿನದಂದು ಆ ದೇವಿಯ ಸನ್ನಿಧಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬಂದರು. ಅದಾದನಂತರ ನಾನು ಪ್ರತಿವರ್ಷ ಅವರ ಜನ್ಮದಿನದಂದು ಅವರ ಆಯುಷ್ಯ ಆರೋಗ್ಯಕ್ಕಾಗಿ ತಾಯಿಯನ್ನು ಬೇಡಿಕೊಂಡು ಪೂಜೆ ಸಲ್ಲಿಸಿ ಪ್ರಸಾದ ಕಳುಹಿಸುವ ಪರಿಪಾಠವಿಟ್ಟುಕೊಂಡೆ.

ಸದಾನಂದಜಿಯವರಿಗೆ ಹಸ್ತ ಸಾಮುದ್ರಿಕ ತಿಳಿದಿತ್ತು. ನನಗೆ ಫಲಜ್ಯೋತಿಷ್ಯದ ಬಗ್ಗೆ ತಿಳಿದಿತ್ತು. ಇಬ್ಬರೂ ಸಮಾನ ಆಸಕ್ತರಾಗಿದ್ದರಿಂದ ನನ್ನ ಅವರ ಆತ್ಮೀಯತೆ ಹೆಚ್ಚಾಗಲು ಕಾರಣವಾಯಿತು. ಅವರು ಅನೇಕ ಪರಿಷದ್ ಅಧಿಕಾರಿಗಳ ಜಾತಕಗಳನ್ನು ನನಗೆ ನೀಡಿದ್ದರು. ಅವರಿಗೆ ಪರಿಷತ್ತಿನ ಬಗ್ಗೆ ಹಾಗೂ ಪದಾಧಿಕಾರಿಗಳ ಆರೋಗ್ಯ ಚಟುವಟಿಕೆಗಳ ಬಗ್ಗೆ ವಿಶೇಷ ಕಾಳಜಿ ಇದ್ದಿತ್ತು.

ಜ್ಯೋತಿಷ್ಯ, ಆಧ್ಯಾತ್ಮ, ಸಂಘಟನೆ, ಹೊಸ ಕಾರ್ಯಕರ್ತರ ಸಂಪರ್ಕ, ಅವರನ್ನು ಕಾರ್ಯಪ್ರವೃತ್ತಗೊಳಿಸುವುದು ಇವುಗಳು ಸದಾನಂದಜಿಯವರ ವಿಶೇಷ ಆಸಕ್ತಿಯ ವಿಷಯಗಳಾಗಿದ್ದುವು. ಅವರ ಕೊನೆಯ ದಿನದವರೆಗೂ ನನ್ನ ಹಾಗೂ ಅವರ ನಡುವೆ ಜ್ಯೋತಿಷ್ಯದ ಕುರಿತಂತೆ ದೂರವಾಣಿಯಲ್ಲಿ ಮಾತುಕತೆ ಚರ್ಚೆಗಳು ನಡೆಯುತ್ತಿದ್ದವು. ಶ್ರೀಸದಾನಂದಜಿಯವರು

ನನ್ನ ವೈಚಾರಿಕ ಬೆಳವಣಿಗೆಗಾಗಿ ಅಧಿವಕ್ತಾ ಪರಿಷತ್ತಿನ ಬೈಠಕ್‌ಗೆ ಹೋಗುವಂತೆ ಹಾಗೂ ಅಲ್ಲೂ ಸಕ್ರಿಯವಾಗಿರುವಂತೆ ಆಗ್ರಹ ಪಡಿಸುತ್ತಿದ್ದರು.

ಪ॥ ಪೂಜ್ಯ ಬೆಲ್ಸರೆ ಮಹಾರಾಜರ ಅಂತಿಮ ಪ್ರವಚನದ ಕಾರ್ಯಕ್ರಮಕ್ಕೆ ಶ್ರೀಸದಾನಂದ ಕಾಕಡೆಯವರು ಬಂದಿದ್ದರು. ಶ್ರೀಸದಾನಂದಜೀಯವರು ಜೊತೆಯಲ್ಲಿದ್ದುದರಿಂದ ನನಗೆ ಅಲ್ಲಿ ಪ್ರವೇಶ, ಸ್ವಾಗತಗಳು ದೊರೆತವು. ಅದು ನನಗೆ ಅತ್ಯಂತ ಸಂತೋಷದ ಸಂದರ್ಭವಾಗಿತ್ತು.

ಕೊನೇದಿನಗಳಲ್ಲಿ ಅವರು ಜರ್ಜರಿತರಾದುದ್ದನ್ನು ನಾನು ಬೆಂಗಳೂರಿನ ಬೈಠಕ್‌ನಲ್ಲಿ ಕಂಡಾಗ ಇನ್ನು ನೀವು ಹೆಚ್ಚಿಗೆ ಪ್ರವಾಸ ಮಾಡಬಾರದು ಎಂದು ಹೇಳುವ ಪ್ರಯತ್ನ ಮಾಡಿದ್ದೆ.

ಮಾನ್ಯ ಸದಾನಂದಜೀಯವರದ್ದು ಸಮರ್ಪಿತ ವ್ಯಕ್ತಿತ್ವ. ಪರಿಷದ್ ಹಾಗೂ ರಾಮಮಂದಿರಗಳೇ ಸದಾ ಅವರ ಮಾತುಕತೆಗಳಲ್ಲಿ ಇಣುಕುತ್ತಿದ್ದುವು ಹಾಗಾಗಿ ಅವರ ಆದರ್ಶ ವ್ಯಕ್ತಿತ್ವವು ಮರಣದ ನಂತರವೂ ಎಲ್ಲರಿಗೂ ಪ್ರೇರಣೆಯಾಗಿ ಮಾರ್ಪಡುತ್ತದೆ.

## ಪೂಜ್ಯರ ಸನ್ನಿಧಿಯಲ್ಲಿ














# ಕರ್ಮಠತೆ, ನಿಸ್ಪೃಹತೆಗಳ ಸಂಗಮ–ಸದಾನಂದಜೀ

– **ಚಂಪತ ರ್ಾ, ದೆಹಲಿ**

**ವಿಶ್ವ ಹಿಂದು ಪರಿಷದ್ ಸಂಯುಕ್ತ ಮಹಾಕಾರ್ಯದರ್ಶಿ.**

ಸಂಘಟನೆಯು ಒಪ್ಪಿಸಿದ ಹೊಣೆಗಾರಿಕೆಯನ್ನು ನಿರ್ವಹಿಸುವಾಗ ಪೂರ್ಣ ಶಕ್ತಿಯನ್ನು ಸುರಿದು ಕೆಲಸಮಾಡುತ್ತಿದ್ದ ಸದಾನಂದ ನೀಲಕಂಠ ಕಾಕಡೆಯವರ ಸ್ಮರಣೆಗೆ ವಿನಮ್ರತೆಯಿಂದ ನಮಸ್ಕರಿಸುತ್ತೇನೆ. ವಿಶ್ವಹಿಂದು ಪರಿಷತ್ತಿನ ಅತಿ ಹಿರಿಯ ಕಾರ್ಯಕರ್ತರಲ್ಲಿ ಅವರೊಬ್ಬರು. ಔಪಚಾರಿಕವಾಗಿ ಅವರಿಗೆ ಶ್ರದ್ಧಾಪೂರ್ವಕವಾಗಿ ಗೌರವವನ್ನು ಅರ್ಪಿಸುವುದರೊಂದಿಗೆ ನನಗೆ ಅನ್ನಿಸುವುದೇನೆಂದರೆ; ಸಮಾಜದ ಸೇವೆ ಮಾಡಲು ಹೊರಟ ಕಿರಿಯ ಕಾರ್ಯಕರ್ತರೆಲ್ಲರಿಗೂ ಅವರ ಜೀವನವೊಂದು ಅನುಕರಣೀಯವಾದುದರಿಂದಲೂ ಅವರು ಗೌರವಾರ್ಹರು ಎಂದು. ದೇಶಕ್ಕಾಗಿ ಬಲಿದಾನ ಮಾಡುವ, ಗಡಿಗಳಲ್ಲಿ ಹೋರಾಡುತ್ತ ಶತ್ರುಗಳ ಗುಂಡನ್ನು ಎದುರಿಸುವ, ಸಮಾಜದ್ರೋಹಿಗಳನ್ನು ಎದುರಿಸುತ್ತ ಪ್ರಾಣತ್ಯಾಗ ಮಾಡುವವರ ಜೀವನವು ಆದರ್ಶಪ್ರಾಯವೆನ್ನುವುದು ನಿಜವೆ. ಅವರೊಂದಿಗೆ; ದೇಶ ಮತ್ತು ಸಮಾಜದ ರಕ್ಷಣೆ, ಉನ್ನತಿ, ಅಲ್ಲಿನ್ನೂ ಉಳಿದುಕೊಂಡ ಕಳಂಕಗಳ ನಿವಾರಣೆಗಾಗಿ ತಮ್ಮ ಸಂಪೂರ್ಣ ಜೀವನವನ್ನು ತೇಯುತ್ತಾ ಕ್ರಿಯಾಶೀಲರಾಗಿರುವವರೂ ಕೂಡಾ ಅಷ್ಟೇ ಗೌರವಾರ್ಹರು. ಜೀವನದ ಗುರಿಯನ್ನು ನಿರ್ಧರಿಸಿ; ಅದನ್ನೇ ಕಣ್ಣ ಮುಂದಿಟ್ಟುಕೊಂಡು, ಆ ದಿಕ್ಕಿನಲ್ಲೇ ಸದಾ ಉತ್ಸಾಹ ಪೂರ್ವಕವಾಗಿ ಸಾಗುವುದಿದೆಯಲ್ಲ; ಅದು ಅತಿ ಕಠಿಣ ಮಾರ್ಗ ಎನ್ನುವುದು ನನ್ನ ನಂಬಿಕೆ. ಜೀವನದಲ್ಲಿ ಏರಿಳಿತಗಳಿವೆ. ಸಾಮಾಜಿಕ ಕಾರ್ಯಕರ್ತರಿಗಂತೂ ಒಂದುಕಡೆ ಸನ್ಮಾನವಾದರೆ ಮತ್ತೊಂದೆಡೆ ಅಪಮಾನವನ್ನು ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ವಿಫಲತೆಯೇ ಎದುರಾದಾಗ ನಿರಾಶೆಯೂ ಕವಿದು ಬಿಡುತ್ತದೆ. ಸುತ್ತಲಿನ ಆಕರ್ಷಣೆಗಳು ಮನಸ್ಸನ್ನು ಸೆಳೆಯುತ್ತವೆ. ಈ ಮನ ಮರ್ಕಟದ ಚಂಚಲತೆಯನ್ನು ತಡೆದು ನಂಬಿದ ದಿಕ್ಕಿನಲ್ಲಿ ಸಾಗುವುದು, ಬಲಿದಾನದ ಹಾದಿಯ ರೀತಿಗಿಂತಲೂ ಕಷ್ಟಕರವಾದುದು. ಸದಾನಂದಜಿ ಈ ಹಾದಿಯನ್ನು ತುಳಿದವರು. ಹಾಗಾಗಿ ಅವರು ಗೌರವಾದರಗಳಿಗೆ ಪೂರ್ಣಪಾತ್ರರು.

ನಾವು 40 ರ ದಶಕದ ಸಮಾಜದ, ಹಾಗೂ ಆಗಿನ ಶಿಕ್ಷಣ ಪಡೆದ ಅದರಲ್ಲೂ ಆಧುನಿಕ ಪದವಿಯನ್ನು ಪಡೆದ ತರುಣರ ಆಲೋಚನಾಕ್ರಮವನ್ನು ನೆನಪಿಸಿಕೊಳ್ಳೋಣ. ಆಂಗ್ಲ ಶಿಕ್ಷಣ ಪಡೆದವರನ್ನು ಆಗ ಬ್ರಿಟಿಷ ಸರಕಾರವಾಗಲೀ, ನಂತರ ಸ್ವದೇಶೀ ಸರಕಾರಿ ನೌಕರಿಗಳಾಗಲೀ ಕೈಬೀಸಿ ಕರೆಯುತ್ತಿದ್ದವು. ವಿಜ್ಞಾನದಲ್ಲಿ ಪದವಿ ಪಡೆದವರನ್ನು ಬುದ್ಧಿವಂತರೆಂದೇ ಪರಿಗಣಿಸುತ್ತಿದ್ದ ಆ ಕಾಲದಲ್ಲಿ ಸದಾನಂದಜೀಗಂತೂ ಒಳ್ಳೆಯ ಸ್ಥಾನಮಾನಗಳೇ ದೊರೆಯುತ್ತಿದ್ದವು. ಅದನ್ನು ಬಿಟ್ಟು ಬಂದವರು ಸದಾನಂದಜಿ. ಅವರ ಕುಟುಂಬವು ಶ್ರೀಮಂತ ಹಿನ್ನೆಲೆಯದಾಗಿತ್ತು. ವಯಸ್ಸಾದ ಮೇಲೂ ಅವರ ಸುಂದರ ಶರೀರವನ್ನು ಕಾಣುವಾಗ ಅವರು ತಾರುಣ್ಯದಲ್ಲಿ ಹೇಗಿರಬಹುದು ಎಂದು ಅನಿಸುವುದು ಸ್ವಭಾವಿಕವೆ. ಇಳಿವಯಸ್ಸಿನಲ್ಲೂ ಅವರಿಗೆ ಹೊಸವಿಚಾರಗಳನ್ನು ತಿಳಿಯಬೇಕೆನ್ನುವ

ಇಚ್ಛೆಯಿದ್ದುದು ಆಶ್ಚರ್ಯಕರವೆನಿಸುತ್ತಿತ್ತು. ಹಾಗಿರುವಾಗ ತಾರುಣ್ಯದಲ್ಲಿ ಅವರ ಉತ್ಸಾಹ ಹೇಗಿದ್ದಿರಬಹುದು? ಹೀಗಿದ್ದ ವ್ಯಕ್ತಿಗೆ ಯಾವ ಸ್ಥಾನವನ್ನು ಪಡೆಯುವುದು ಕಷ್ಟಕರವಾಗಬಹುದಿತ್ತು? ಹಣವನ್ನು ಸಂಪಾದಿಸುವುದಂತೂ ಅವರಿಗೆ ಕಷ್ಟವೇ ಆಗಿರಲಿಲ್ಲ. ಇಷ್ಟಿದ್ದೂ ಸದಾನಂದಜಿ ಒಂದು ಕಷ್ಟಕರವಾದ ಹೊಸ ಹಾದಿಯನ್ನು ಆರಿಸಿಕೊಂಡರು. ಹೇಳಿಕೇಳಿ ಅದು; ಬ್ರಿಟಿಷರಿಂದ ದೇಶವನ್ನು ಬಿಡುಗಡೆಗೊಳಿಸಬೇಕೆಂಬ ವಾತಾವರಣವಿದ್ದ ಕಾಲ. ಯುವಕರಿಗೆ ತಮ್ಮ ತಾರುಣ್ಯದ ಕಾಲವನ್ನು ಅದಕ್ಕಾಗಿ ನೀಡುವುದು ಆದರ್ಶವೆನಿಸುತ್ತಿದ್ದ ಕಾಲ. ಸ್ವಾತಂತ್ರ್ಯ ಬರುತ್ತಲೇ ಇವರೆಲ್ಲರೂ ರಾಜಕೀಯಕ್ಕೆ ಇಳಿದರು. ಸಮಾಜ ಸೇವೆಯ ಮಾರ್ಗದಲ್ಲೆಂದು ಹೊರಟವರು ಕೂಡಾ ರಾಜಕಾರಣಿಗಳ ಜೊತೆಯಲ್ಲಿದ್ದೇ ತಮ್ಮ ಗುರಿಯನ್ನು ಪೂರೈಸಬೇಕೆಂದುಕೊಂಡರು. ಆ ಸ್ಥಿತಿಯಲ್ಲಿ; ಹೊಸತೇ ಹಾದಿಯಲ್ಲಿ ಹೊರಟ ಸದಾನಂದಜಿ ಯಂಥವರಿಗಂತೂ ತಮ್ಮ ದಾರಿಯ ಸಫಲತೆಯ ಬಗ್ಗೆ ನಿಶ್ಚಿತ ನಂಬಿಕೆ ಬಿಟ್ಟರೆ ವಾತಾವರಣವಂತೂ ಅದಕ್ಕೆ ಪೂರಕವಾಗಿರಲಿಲ್ಲ. ಸದಾನಂದಜಿ ಗೌರವಕ್ಕೆ ಪಾತ್ರರಾಗಲು ಕಾರಣವೆಂದರೆ, ಅವರು ಯಾವ ಮಾರ್ಗವನ್ನು 1938ರಲ್ಲಿ ಆರಿಸಿದರೋ 2010ರ ಜುಲೈ 12ರಂದು ತಮ್ಮ ಶರೀರವು ಶಾಂತವಾಗುವರೆಗಿನವರೆಗೆ ಅದೇ ದಾರಿಯಲ್ಲಿ ಅದೇ ಏಕಾಗ್ರತೆಯಿಂದ ಮುನ್ನಡೆದರು. 1995ರ ಎರಡನೆ ಏಕಾತ್ಮಕಾಯಾತ್ರೆಯ ಸಂಯೋಜಕರಾಗಿ ಅವರು ಬಂದಾಗ ಅವರ ಸಂಪರ್ಕವು ನನಗೆ ಒದಗಿಬಂದಿತು. ಸಂಪೂರ್ಣ ಭಾರತದಲ್ಲಿ ನಡೆಯುವ ಯಾತ್ರೆಯ ಭೂಪಟಚಿತ್ರವನ್ನು ಅವರು ತಮ್ಮ ಕೋಣೆಯಲ್ಲಿ ರಚಿಸಿದರು. ಹಗಲು ರಾತ್ರಿ ಅದನ್ನೇ ಯೋಚಿಸುತ್ತಿದ್ದರು, ಬರೆಯುತ್ತಿದ್ದರು. ನಕ್ಷೆಗಳನ್ನು ರಚಿಸುತ್ತಿದ್ದರು. ಆಗ ಅವರ ವಯಸ್ಸು 74. ಕೆಲಸದಲ್ಲಿ ಅವರೆಷ್ಟು ಮಗ್ನರಾಗುತ್ತಿದ್ದರು ಎನ್ನುವುದಕ್ಕೆ ಇದೊಂದು ಉದಾಹರಣೆಯಷ್ಟೆ.

ಕೇಂದ್ರೀಯ ಸಮಿತಿಯಲ್ಲಿ, ದೇಶದ ಎಲ್ಲಾ ಪ್ರಾಂತಗಳ ಲೆಕ್ಕಪತ್ರಗಳನ್ನು ಬರೆದು ವ್ಯವಸ್ಥಿತವಾಗಿಡಲು ಮಾರ್ಗದರ್ಶನ ಮಾಡುವಂತೆ ಅವರನ್ನು ಕೋರಲಾಯಿತು. ಸರಿ! ಸದಾನಂದಜಿ ಒಬ್ಬರೇ ದೇಶದ ಎಲ್ಲಾ ಕಡೆ ಪ್ರವಾಸಕ್ಕೆ ಹೊರಟರು. ಯಾವ ಯಾವ ದಸ್ತಾವೇಜುಗಳನ್ನು ನೋಡಬೇಕೆಂದುಕೊಂಡಿದ್ದರೋ ಅವುಗಳನ್ನು ಸ್ವತಃ ಪರಿಶೀಲಿಸುವವರೆಗೆ ಆಯಾ ಕೇಂದ್ರಗಳನ್ನು ಬಿಟ್ಟು ಹೊರಡಲಿಲ್ಲ. ಅಲ್ಲಲ್ಲಿನ ಕಾರ್ಯಕರ್ತರು ಎಷ್ಟೇ ಗೊಣಗಲಿ, ಅಸಮಾಧಾನಗೊಳ್ಳಲಿ, ಸಿಟ್ಟುಗೊಳ್ಳಲಿ; ತಾವು ಮಾತ್ರ ಅದರಿಂದ ಒಂದಿಷ್ಟೂ ವಿಚಲಿತರಾಗಲಿಲ್ಲ. ಹಿಡಿದ ಕೆಲಸವನ್ನು ಬಿಡದೆ ಬೆನ್ನುಹತ್ತಿ ಮುಗಿಸಿ ಕೇಂದ್ರ ಕಾರ್ಯಾಲಯಕ್ಕೆ ಬಂದು ಒಂದು ಚಾರ್ಟ್‌ನಲ್ಲಿ ಇಡೀ ದೇಶದ ಲೆಕ್ಕಪತ್ರಗಳ ಸ್ಥಿತಿಯನ್ನು ಬರೆದು ಒಪ್ಪಿಸಿದರು. ನಾನಂತೂ ಅವರ ಈ ಶ್ರಮವನ್ನು ಕಂಡು ದಂಗಾಗಿ ಬಿಟ್ಟೆ.

2007ರಲ್ಲಿ ಪ್ರಯಾಗದಲ್ಲಿ ವಿಶ್ವಹಿಂದು ಪರಿಷದ್‌ನ ಮೂರನೆ ಸಮ್ಮೇಳನದ ನಿಶ್ಚಯವಾಯಿತು. ಅದಕ್ಕೆ ಆರು ತಿಂಗಳ ಮೊದಲು ನಾನು; ಓಂಕಾರಜಿಭಾವೆ, ಸದಾನಂದಜಿಯವರೊಂದಿಗೆ ಮಾತನಾಡುತ್ತಿದ್ದೆವು. ಸಮ್ಮೇಳನದಲ್ಲೇ ವಿಶ್ವಹಿಂದು ಪರಿಷತ್ತಿನ ಪೂರ್ಣ ಚರಿತ್ರೆಯನ್ನು ಸಂಕಲಿಸಿ ಪ್ರಕಟಿಸಬೇಕೆಂದು ಕಾಕಡೆಯವರು ಅಲ್ಲಿ ಹೇಳಿದರು. ಮತ್ತು ಅದನ್ನು ಪ್ರಕಟಿಸಿಯೇ ಬಿಟ್ಟರು. ಹಿಂದಿ ಆವೃತ್ತಿಯು ಮುದ್ರಣವಾಗುತ್ತಿದ್ದಂತೆ ಅದರ ಇಂಗ್ಲೀಷ್ ಅನುವಾದವನ್ನು ಮಾಡಿಸಿ ಅದನ್ನೂ ಪ್ರಕಾಶಿಸಿಬಿಟ್ಟರು. ಹಠ ಹಿಡಿದು ಮಾಡುವ ಕಾರ್ಯಮಗ್ನತೆಯ ಸದಾನಂದಜಿಯಂತಹವರು ಮಾತ್ರ ಇಂತಹ ಮಹತ್ಕಾರ್ಯವನ್ನು ತಮ್ಮ 86ರ ವಯಸ್ಸಿನಲ್ಲೂ ಮಾಡಬಲ್ಲರು. ಸಮ್ಮೇಳನದ ನಂತರ ಮತ್ತೆ

ಸದಾನಂದಜಿ 41 ಪ್ರಾಂತಗಳ ಸಮ್ಮೇಳನದ ಲೆಕ್ಕಪತ್ರಗಳನ್ನು ನೋಡಲು ಹೊರಟರು. ನನಗೂ ಆ ಸಾರಿ ಅವರೊಂದಿಗಿರುವ ಅವಕಾಶ ಸಿಕ್ಕಿತು. ಸ್ವಚ್ಛವಾಗಿ ಲೆಕ್ಕಪತ್ರವನ್ನು ಇಡುವ ರೀತಿಯನ್ನು ಅವರಿಂದಲೇ ಕಲಿಯಬೇಕು. ನನ್ನಿಂದ ಅಂತಹ ಸಫಲತೆಯನ್ನು ಸಾಧಿಸುವುದು ಅಸಾಧ್ಯವಾಗುತ್ತಿತ್ತು ಅನ್ನುವುದನ್ನು ನಾನು ಒಪ್ಪಲೇಬೇಕು.

ಈಚೆಗಂತೂ ಹಣಸಂಗ್ರಹವೇನೋ ಸುಲಭವೆನಿಸಬಹುದು. ಆದರೆ ಅದರ ಲೆಕ್ಕಪತ್ರವನ್ನು ಇಡುವ ಕೆಲಸ ಕಠಿಣ. ಸದಾನಂದಜಿ ಪ್ರತಿಯೊಂದು ಪೈಸೆಗಳ ಲೆಕ್ಕವನ್ನು ಇಡುವಂತೆ ನೋಡಿಕೊಳ್ಳುತ್ತಿದ್ದರು. ನಾನು ಕೆಲವೊಮ್ಮೆ ಈ ವಯಸ್ಸಿನಲ್ಲೇಕೆ ಇಷ್ಟೊಂದು ಪರಿಶ್ರಮವನ್ನು ತೆಗೆದುಕೊಳ್ಳುತ್ತಿದ್ದೀರಿ ಎಂದು ಕೇಳಿಯೂ ಕೇಳಿದ್ದೆ. ಆದರೆ ಕೊನೆಯ ಕ್ಷಣದವರೆಗೂ ತಮ್ಮದೇ ಆದ ಕಠಿಣ ರೀತಿಯೇ ಅವರದ್ದಾಗಿತ್ತು. ಶ್ರೀಬಾಬುರಾವ್ ದೇಸಾಯಿಯವರಿಗೂ ಇದು ಚೆನ್ನಾಗಿ ಗೊತ್ತು. ಜಗನ್ನಾಥ ಜೋಷಿಯವರ ಜೀವನ ಚರಿತ್ರೆಯ ಮರಾಠಿ ಮತ್ತು ಹಿಂದೀ ಪುಸ್ತಕಗಳನ್ನು ಪ್ರಕಟಿಸಿದ ಅವರ ಪರಿಶ್ರಮ ಎಲ್ಲರಿಗೂ ತಿಳಿದದ್ದೇ. ಆದರೆ ಅವನ್ನು ಮಾರುವ ಕಡೆಗೂ ಅವರು ಗಮನ ನೀಡಿದುದು ಬಹಳ ಜನಕ್ಕೆ ತಿಳಿದಿರಲಿಕ್ಕಿಲ್ಲ.

ಅವರಿಗೆ ಮೊಣಕಾಲಿನ ಕೀಲು ಬಹಳ ಭಾಧೆಯನ್ನು ನೀಡುತ್ತಿತ್ತು. ಒಬ್ಬ ವೈದ್ಯರು ಅವರಿಗೆ ಮೊಣಕಾಲಿಗೆ ಸ್ಟೀಲ್‌ನಿಂದ ತಯಾರಿಸಿದ ಫ್ರೇಮ್ ಒಂದನ್ನು ಉಪಯೋಗಿಸುವಂತೆ ಸಲಹೆ ನೀಡಿದರು. ಅದನ್ನು ತಂದು ಕಾರ್ಯಾಲಯದಲ್ಲಿ ಎಲ್ಲರೆದುರು ಅದನ್ನು ಧರಿಸಿ ನಡೆದರು. ವೇಗವಾಗಿ ನಡೆಯಲೂಬಹುದು ನೋಡಿ, ಎನ್ನುತ್ತ ವೇಗವಾಗಿಯೂ ನಡೆದರು. ನಾನೀಗ ಪೂರ್ಣಗುಣ ಹೊಂದಿದೆ ಎಂದರು. ಅಟಲ್‌ಜಿಯವರೂ ಆಗ ಅದೇ ರೀತಿಯ ಕಷ್ಟವನ್ನು ಅನುಭವಿಸುತ್ತಿದ್ದರು. ಸದಾನಂದಜಿ ತನಗಾದ ಗುಣಲಾಭವನ್ನು ಅಟಲ್‌ಜೀಗೂ ತಿಳಿಸಬೇಕೆಂದುಕೊಂಡರು. ಹಾಗೆಯೇ ಹೋದರು ಕೂಡಾ. ಅಟಲ್‌ಜಿಯವರಿಗೂ ಅದೇ ರೀತಿಯ ಫ್ರೇಮ್‌ಗಳನ್ನು ಮಾಡಿಸಿಕೊಟ್ಟರು. ಅಟಲ್‌ಜಿ ಅವುಗಳನ್ನು ಉಪಯೋಗಿಸಿದರೋ ಇಲ್ಲವೋ ಗೊತ್ತಿಲ್ಲ.

ಇನ್ನು ಮೊಣಕಾಲಿನ ಶಸ್ತ್ರಕ್ರಿಯೆಯ ಬಗ್ಗೆ ಕೂಡಾ ಅವರೇ ನಿಶ್ಚಯಿಸಿಕೊಂಡರು. ಪ್ರಧಾನಿಗಳಾಗಿದ್ದ ಅಟಲ್‌ಜಿ ಕೂಡಾ ತಮ್ಮ ಮೊಣಕಾಲಿನ ಶಸ್ತ್ರಕ್ರಿಯೆಗೆ ಅಮೆರಿಕಾದ ವೈದ್ಯರನ್ನು ಕರೆಸಿಕೊಳ್ಳಬೇಕಾಯಿತು. ಆನಂತರವೂ ಅವರ ಕಾಲು ಸುಧಾರಿಸಿತು ಎನ್ನುವ ಹಾಗಿರಲಿಲ್ಲ. ಆದರೆ ಮನೋಬಲದ ಮುಂದೆ ಏನಿದೆ! ಸದಾನಂದಜಿ ಶಸ್ತ್ರಚಿಕಿತ್ಸೆ ಮಾಡಿಕೊಂಡರು. ಅವರ ಎರಡೂ ಕಾಲುಗಳು ಸುಧಾರಿಸಿದವು. ಕೊನೆಗೆ ಅವರು ಸ್ಟೀಲ್ ಫ್ರೇಮ್‌ನ್ನು ಬಿಟ್ಟು ನಡೆಯುತ್ತಿದ್ದರು.

ಸಾವು ಸನಿಹದಲ್ಲೇ ನಿಶ್ಚಿತ ಅನ್ನುವುದು ಅವರಿಗೆ ತಿಳಿದಿತ್ತು. ಅದಕ್ಕೆ ಅವರು ಪೂರ್ವ ತಯಾರಿ ಮಾಡಿಕೊಂಡರು. 2009ರ ಕೊನೆಯ ತಿಂಗಳುಗಳಲ್ಲಿ ಅವರು ದೆಹಲಿಯ ಕಾರ್ಯಾಲಯಕ್ಕೆ ಬಂದರು. ತಮ್ಮ ಕೋಣೆಯಲ್ಲಿ ಕುಳಿತು ತಮ್ಮ ಬೀರುವಿನಿಂದ ಎಲ್ಲಾ ವಸ್ತುಗಳನ್ನು ತೆಗೆಸಿದರು. ಯಾವ ವಸ್ತು ಯಾರ ಬಳಿ ಸದುಪಯೋಗವಾಗುತ್ತದೆ ಎಂದು ತೂಗಿ, ಎಣಿಸಿ ಅವವುಗಳನ್ನು ಅವರವರಿಗೆ ಕೊಟ್ಟರು. ಪುಸ್ತಕ, ಜಪಮಾಲೆ, ಬಟ್ಟೆ ಇಂತಹವುಗಳಿಗೆಲ್ಲ ಸತ್ಪಾತ್ರರನ್ನು ಅವರು ಹುಡುಕಿದ್ದರು. ಯಾಕೆ ಈ ರೀತಿ ಅವಸರ ಎಂದು ನಾನು ಕೇಳಿದೆ. ಅದಕ್ಕೆ ಅವರು ಮುಂದಿನ ತಿಂಗಳುಗಳ ಮುಂದಿನ ತಿಂಗಳೊಂದನ್ನು ಹೇಳುತ್ತಾ ಅಲ್ಲಿನ ತಾರೀಕುಗಳೊಂದು ದಿನದಂದು ತಾನು ದೇಹ ತ್ಯಾಗ ಮಾಡುವೆನೆಂದೂ, ಅದರೊಳಗೆ ಬಂಧ ಮುಕ್ತನಾಗಲು ತಾನು ಬಯಸುತ್ತಿರುವೆನೆಂದೂ ಹೇಳಿದರು.

ಇಂತಹದೊಂದು ಅಪೂರ್ವ ವೈರಾಗ್ಯ ಮನೋಭಾವದ ಸಂತರಾಗಿದ್ದರು ಸದಾನಂದಜಿ. ಸಾಯುವ ಮೊದಲೇ ಎಲ್ಲವುಗಳಿಂದ ಮುಕ್ತನಾಗುವ ರೀತಿ ಇಂದು ಸಾರ್ವಜನಿಕ ಜೀವನದಲ್ಲೂ ಗೃಹಸ್ಥ ಜೀವನದಲ್ಲೂ ಕಾಣುವುದೂ ಅಪರೂಪವಾಗುತ್ತದೆ. ಹಾಗಾಗಿ ಅಂತಹ ಸದಾನಂದಜಿ ನನ್ನ ಗೌರವಕ್ಕೆ ಸದಾ ಪಾತ್ರರು. ಅವರಿಗೆ ಮತ್ತೆ ಮತ್ತೆ ಪ್ರಣಾಮಗಳನ್ನು ಸಲ್ಲಿಸುತ್ತೇನೆ. **(ಹಿಂದಿ ಲೇಖನದ ಅನುವಾದ)**

## ಆ ದಿನಗಳ ನೆನಪೇ ಸುಂದರ–ಸ್ಫೂರ್ತಿಪ್ರದ













# ನನ್ನ ಸ್ಮೃತಿಯಲ್ಲಿ ಸದಾನಂದಜೀಯವರು

**–ಸುಧಾಂಶು ಮೋಹನ ಪಟ್ನಾಯಕ್, ಬೆಂಗಳೂರು**

**ಕರ್ನಾಟಕ ಮತ್ತು ಆಂಧ್ರಗಳನ್ನೊಳಗೊಂಡ ನಾಲ್ಕು ಪ್ರಾಂತಗಳ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ**

ನಾನು ಒರಿಸ್ಸಾ ಪ್ರಾಂತದ ಸಂಘಟನಾ ಕಾರ್ಯದರ್ಶಿಯಾಗಿದ್ದಾಗ, ಮಾನ್ಯ ಸದಾನಂದಜೀಯವರು ಕೇಂದ್ರದಿಂದ ಪ್ರಾಂತ ಕಾರ್ಯಾಲಯದ ಆಂತರಿಕ ಲೆಕ್ಕ–ಪತ್ರಗಳ ಪರಿಶೋಧನೆಗಾಗಿ, ಮತ್ತು ಪ್ರಾಂತದ ಆರ್ಥಿಕ ಟೋಳಿಯ ಬೈಠಕ್ಕಿಗಾಗಿ ಬಂದಿದ್ದರು. ಅವರು ತಂಗುವ ವ್ಯವಸ್ಥೆಯನ್ನು ವಿಹಿಂಪ ಪ್ರಾಂತ ಕಾರ್ಯಾಲಯವು ಮಾಡಬೇಕಾಗಿತ್ತು. ಅವರಿಗೆ ಸಹಾಯಕನಾಗಿ ಕೆಲಸ ಮಾಡುವ ಜವಾಬ್ದಾರಿ ನನ್ನದಾಗಿತ್ತು ಸಾಧಾರಣವಾಗಿ ಸದಾನಂದಜಿಯವರು ತಮ್ಮ ಕಾರ್ಯವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಆದರೆ ಅಂದು ಅವರ ಆರೋಗ್ಯ ಚೆನ್ನಾಗಿರಲಿಲ್ಲದ್ದುದರಿಂದ ಆ ಒಂದು ದಿನ ನಾನೇ ಮಾನ್ಯ ಸದಾನಂದಜೀಯವರ ಬಟ್ಟೆ ಒಗೆಯುವುದನ್ನು ಮುಗಿಸಿದೆ. ಆಗ ಒಂದು ಶರ್ಟು ಕೊಂಚ ಹರಿಯಿತು, “ಹೊಸ ಬಟ್ಟೆಯನ್ನೇ ಹೊಲಿಸಿಬಿಡೋಣ” ಎಂದು ಅವರಿಗೆ ಹೇಳಿದೆ. “ಬೇಡ ಬೇಡ ಇದು ಇನ್ನೂ ಕೊಂಚ ದಿನ ಹಾಕಿಕೊಳ್ಳಬಹುದಾಗಿದೆ. ನೀವು ಒಂದು ಸೂಜಿ ಮತ್ತು ದಾರ ಕೊಡಿ, ನಾನು ಹೊಲಿದು ಸರಿಪಡಿಸುತ್ತೇನೆ” ಎಂದು ಹೇಳಿ ಅದನ್ನು ಹೊಲಿದು, ಹಾಕಿಕೊಳ್ಳುವ ಸ್ಥಿತಿಗೆ ತಂದರು. ನಾನು ವಿಸ್ಮಿತನಾಗಿ ಸುಮ್ಮನೆ ನೋಡುತ್ತ ನಿಂತೆ. ಲೆಕ್ಕಪತ್ರಗಳನ್ನು ಪರಿಶೀಲಿಸಲು ದಿಲ್ಲಿಯಿಂದ ಬಂದ ಅಧಿಕಾರಿಗಳೊಬ್ಬರು ಅಂತಹ ಯಾವ ಹಮ್ಮು–ಬಿಮ್ಮಿನ ಭಾವನೆಯೂ ಇಲ್ಲದೆ ಅತ್ಯಂತ ಸರಳ, ಸಾದಾ ಜೀವನ ನಡೆಸುತ್ತಿರುವುದು ನನಗೆ ವಿಶೇಷವೆನಿಸಿತು. ನಾನು ಮತ್ತೊಮ್ಮೆ ಹೊಸ ಬಟ್ಟೆತರಲೇ ಎಂದುದಕ್ಕೆ ಅವರು, “ಪ್ರಚಾರಕನು ತನ್ನ ಬಳಿ ಹೆಚ್ಚು ಬಟ್ಟೆ ಇಟ್ಟುಕೊಳ್ಳಬಾರದು. ಹೊಸ ಬಟ್ಟೆಯನ್ನು ಆಗಾಗ ಹಾಕಿಕೊಳ್ಳಬಾರದು. ಜನರು ನಮ್ಮ ನಡವಳಿಕೆಗಳನ್ನು ಬಹಳ ಹತ್ತಿರದಿಂದ ನೋಡುತ್ತಾರೆ, ಎಂದರು, ಹೀಗೆ ಸರಳ ಜೀವನದ ಉನ್ನತ ಚಿಂತನವನ್ನು ಪ್ರತ್ಯಕ್ಷ ನೋಡಿ ದಂಗಾದೆ.

ಅವರು ತಮ್ಮ ಕಾರ್ಯ ಮತ್ತು ಕರ್ತವ್ಯ ನಿಷ್ಠೆಯಲ್ಲಿ, ಶಿಸ್ತುಪಾಲನೆಯಲ್ಲಿ, ಬಹಳ ಕಠಿಣವಾಗಿರುತ್ತಿದ್ದರು. ಒರಿಸ್ಸಾದ ವಾರ್ಷಿಕ ಲೆಕ್ಕ ಪರಿಶೀಲನೆ ಮಾಡಿ ಎಲ್ಲವೂ ಸಮರ್ಪಕವಾಗಿದ್ದುದನ್ನು ಕಂಡು ಬಹಳ ಸಂತೋಷಪಟ್ಟರು. ಆದರೆ ಕೇಂದ್ರದ ಭಾಗವನ್ನು ಪ್ರಾಂತ್ಯವು ಕೊಟ್ಟಿರಲಿಲ್ಲ. ಕೇಂದ್ರದ ಅಂಶವನ್ನು ಕೊಡುವವರೆಗೆ ತಾನು ಊಟ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಈ ಕಠೋರ ನಿರ್ಧಾರವನ್ನು ಕೇಳಿದ ಕೂಡಲೆ, ಪ್ರಾಂತದ ಎಲ್ಲ ಪದಾಧಿಕಾರಿಗಳು ಸೇರಿ ಒಟ್ಟು 20,000 ರೂಗಳನ್ನು ತಕ್ಷಣ ಕೊಟ್ಟುಬಿಟ್ಟರು. ಆಗ ಅವರಿಗೆ ಸಮಾಧಾನವಾಯಿತು. ಇದು ಮಾನ್ಯ ಸದಾನಂದಜೀಯವರ ಕರ್ತವ್ಯನಿಷ್ಠೆಗೆ ಒಂದು ಉದಾಹರಣೆ. ಹಿಡಿದ ಕಾರ್ಯವನ್ನು ಮುಗಿಸಿಯೇ ಮುಂದಿನ ಕಾರ್ಯ; ಅದು ಸದಾನಂದಜಿಯವರ ರೀತಿ. ವಿಶ್ವ ಹಿಂದು ಪರಿಷದ್ ಜನ ಸಂಘಟನೆಯಾದ್ದರಿಂದ ಎಲ್ಲ ಪದಾಧಿಕಾರಿಗಳೂ ಮೂರು ವರ್ಷಕ್ಕೊಮ್ಮೆ ಚುನಾಯಿಸಲ್ಪಡುತ್ತಾರೆ. 2008 ರಲ್ಲಿ ನಡೆದ ಒಂದು ಘಟನೆ; ಅ.ಭಾ.ಕೇಂದ್ರೀಯ ಬೈಠಕ್ ಶ್ರೀ ಶ್ರೀ ರವಿಶಂಕರ ಗುರೂಜಿಯವರ ಆಶ್ರಮದಲ್ಲಿ ನಡೆಯಿತು. ಆಗತಾನೇ ಮಾನ್ಯ ಸದಾನಂದಜೀಯವರ ಬಲಮೊಣಕಾಲಿನ ಆಪರೇಷನ್ ಮುಗಿದಿತ್ತು. ಕಾರ್ಯಕಾರಿಣಿಯಲ್ಲಿ ಬದಲಾವಣೆಗಳ ಸೂಚನೆ ಚರ್ಚೆಗೆ ಬಂದಿತು. ಆದರೆ ಸಂದರ್ಭವಂತೂ ಸಾರಾಸಗಟು ಬದಲಾವಣೆಗೆ ಅನುಕೂಲವಾಗಿರಲಿಲ್ಲ.

ಹಾಗಾಗಿ ಆಗ ಸದಾನಂದಜೀಯವರು ತಮ್ಮ ವಿಶಾಲ ಅನುಭವದ ಆಧಾರದಿಂದ, ಆ ವಿಷಯವನ್ನು ತಡೆದರು. "ಈ ಬೈಠಕ್ಕು ಈಗ ತಾನೇ ಪ್ರಾರಂಭವಾಗಿದೆ. ಅಲ್ಲದೆ ಗಿರಿರಾಜ ಕಿಶೋರ್ ಅವರೂ ಬಂದಿಲ್ಲ. ಅವರ ಅನುಪಸ್ಥಿತಿಯಲ್ಲಿ ನಿರ್ಣಯ ತೆಗೆದುಕೊಳ್ಳುವುದು ಉಚಿತವಲ್ಲ. "ಎಂದು ಸ್ಪಷ್ಟವಾಗಿ ಹೇಳಿದರು. ಇದರಿಂದ ನಾವೆಲ್ಲರೂ ಒಂದು ವಿಶೇಷ ಮುಜುಗರದಿಂದ ಪಾರಾದೆವು. ಅಲ್ಲಿಂದ ಮುಂದೆ 6 ದಿನಗಳ ಕಾಲ ಎಲ್ಲ ಕಾರ್ಯಕ್ರಮಗಳೂ ವ್ಯವಸ್ಥಿತವಾಗಿ ನಡೆದುವು. ಹೀಗೆ ಮಾನ್ಯ ಸದಾನಂದಜೀಯವರು ಯಾವ ಕಡೆಯಿಂದ ಆಪತ್ತು ಬರುವುದೆಂದು ಅರಿತು ಅದು ಬರುವ ಮೊದಲೇ ನಿವಾರಿಸುವ ನಿಪುಣತೆಯನ್ನು ಹೊಂದಿದ್ದರು. ಅವರ ಅನುಭವದ ನುಡಿಗಳು ಎಷ್ಟೋ ಬಾರಿ ವಿಪತ್ತುಗಳನ್ನು ತಡೆದಿವೆ.

ಕರ್ನಾಟಕ ಉತ್ತರಪ್ರಾಂತದ ಬೆಳಗಾವಿಯಲ್ಲಿ ಸದಾನಂದಜೀಯವರ ಸತತ ಪ್ರಯತ್ನ ಮತ್ತು ಮಾರ್ಗದರ್ಶನದಿಂದ ಬಹು ಕೊಂಚ ಸಮಯದಲ್ಲಿ ಭವ್ಯ ಕಾರ್ಯಲಯವಾಗಿ ಸಮರಸತಾ ಭವನ ನಿರ್ಮಾಣವಾಯಿತು. ಈ ಭವನದ ಉದ್ಘಾಟನೆಗೆ ಮಾನ್ಯ ಪ್ರವೀಣಭಾಯಿ ತೊಗಾಡಿಯಾರವರು ಆಗಮಿಸಿದ್ದರು. ವೇದಿಕೆಯ ಮೇಲಿದ್ದ ಎಲ್ಲ ಅಧಿಕಾರಿಗಳೂ ಭವನವು ಹೇಗೆ ನಿರ್ಮಿಸಲ್ಪಟ್ಟಿತೆಂದು ವಿವರಣೆ ಕೊಟ್ಟರು. ಸದಾನಂದಜೀಯವರ ಸರದಿ ಬಂದಿತು. ಅವರು ವಿಹಿಂಪ ಮತ್ತು ಸಂಘಗಳು ಹೇಗೆ ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆಯೆಂಬುದನ್ನು ವಿಸ್ತಾರವಾಗಿ ವಿವರಿಸಿ, ಈ ಭವನವು ಲೋಕಾರ್ಪಣೆಯಾಗುವುದರ ಅರ್ಥವೇನೆಂಬುದನ್ನು ಮನಮುಟ್ಟುವಂತೆ ವಿವರಿಸಿದರು. ಅವರ ಅಂದಿನ ನುಡಿಗಳು ಅತ್ಯಂತ ಪರಿಣಾಮಕಾರಿಯಾಗಿದ್ದು ಎಲ್ಲರಿಗೂ ಬಹಳ ಸಂತೋಷವಾಯಿತು. ಮಾನ್ಯ ತೊಗಾಡಿಯಾರವರು ಸದಾನಂದಜೀಯವರ ಕಾರ್ಯಕ್ಷಮತೆಯನ್ನು ಕೊಂಡಾಡಿದರು.

ಮಾನ್ಯ ಸದಾನಂದಜೀಯವರು ಅಂತಿಮ ಕ್ಷಣದವರೆಗೂ ತಮ್ಮ ಪಾಲಿನ ಕಾರ್ಯವನ್ನು ಚಾಚೂ ಬಿಡದೆ ನಡೆಸುತ್ತಿದ್ದರು. ಸ್ವಯಂ-ಸೇವಕ ಎಂಬುದಕ್ಕೆ ಅವರು ಅಕ್ಷರಶಃ ಜೀವಂತ ಉದಾಹರಣೆಯಾಗಿದ್ದರು. ಯಾರ ನೆರವೂ ಇಲ್ಲದೆ ತಾವೇ ಎಲ್ಲವನ್ನೂ ನಿರ್ವಹಿಸುತ್ತಿದ್ದ ಪ್ರಾಮಾಣಿಕ ಕಾರ್ಯಕರ್ತನೆನಿಸಿಕೊಂಡರು.

ಒಮ್ಮೆ ಮಾನ್ಯ ಸದಾನಂದಜೀಯವರು ಭಾಗ್ಯನಗರಕ್ಕೆ (ಹೈದರಾಬಾದ್) ಬಂದಿದ್ದರು. ಅವರ ಮಾರ್ಗದರ್ಶನದಲ್ಲೇ ನಿರ್ಮಾಣವಾದ ಭವನದ ಉದ್ಘಾಟನೆಯ ಸಂದರ್ಭ. ಆ ಭವನದ ಒಳಗಡೆ ಒಂದು ಚಿಕ್ಕ ದತ್ತ ಮಂದಿರದ ನಿರ್ಮಾಣವಾಗಬೇಕೆಂದು ಅವರು ಆಗ್ರಹಿಸಿದ್ದರು. ಅದರಂತೆ ಶ್ರೀ ಕೃಷ್ಣಾರೆಡ್ಡಿಯವರು ಮತ್ತು ಮಾಣಿಕಾಚಾರಿಯವರೂ ಮಂದಿರ ನಿರ್ಮಾಣ ಮಾಡಿದ್ದರು. ಕಾರ್ಯಾಲಯವೂ ಒಂದು ದೇವಮಂದಿರವೆಂದು ಅವರು ಭಾವಿಸುತ್ತಿದ್ದರು. ಮಾನ್ಯ ಸದಾನಂದಜೀಯವರು 5 ದಿನಗಳ ಕಾಲ ಆ ಭವನದಲ್ಲಿದ್ದರು.

ಒಂದು ದಿನ ಇದ್ದಕ್ಕಿದ್ದಂತೆ ಅವರ ಶರೀರದ ಸಕ್ಕರೆಯ ಅಂಶ ಕಡಿಮೆಯಾಗಿ ಮೂರ್ಛೆ ಹೋದರು. ಕೂಡಲೇ ವೈದ್ಯರನ್ನು ಕರೆತಂದು ಚಿಕಿತ್ಸೆ ಮಾಡಿಸಲಾಯಿತು. ಎಚ್ಚರವಾದ ಕೂಡಲೆ, "ಸುಧಾಂಶುಜೀ, ನಾನು ನಿದ್ದೆ ಮಾಡಿಬಿಟ್ಟಿದ್ದೆನೇ?" ಎಂದು ಕೇಳಿದರು. ನಾನು, "ಹೌದು, ಹೌದು. ನಿಮಗೆ ಬಹಳ ಆಯಾಸವಾಗಿತ್ತು ಆದ್ದರಿಂದ ಕೊಂಚ ನಿದ್ದೆ ಬಂದಿದ್ದು ಸಹಜ" ಎಂದೆ. ನಂತರ ಅವರು ಓಡಾಡುವ ಮಟ್ಟಕ್ಕೆ ಬಂದದ್ದು ನಮಗೆಲ್ಲರಿಗೂ ಸಮಾಧಾನದ ವಿಷಯವಾಗಿತ್ತು. ಹೀಗೆ ಶರೀರದ ಸ್ವಾಸ್ಥ್ಯದ ಚಿಂತೆಯೇ ಅವರಿಗಿರಲಿಲ್ಲ. ಇಂದು ವಿಶ್ವಹಿಂದುಪರಿಷದ್ ಸಮರ್ಥವಾಗಿದ್ದು

ಸಫಲತೆಯ ಹಾದಿಯಲ್ಲಿದೆ. ಅದರ ಅಡಿಪಾಯವಾಗಿ ಮಾನ್ಯ ಸದಾನಂದಜೀಯವರಂತಹ ನಿಷ್ಠಾವಂತ ಕಾರ್ಯಕರ್ತರ ಅವಿರತ ಪರಿಶ್ರಮ, ಕಠೋರ ಸಾಧನೆ ಇದೆ.

ಅಂತಿಮ ಸಮಯದವರೆಗೂ ಅವರೊಡನೆಯೇ ಇದ್ದು ಅವರ ಸೇವಾ ಶುಶ್ರೂಷೆಗಳನ್ನು ಮಾಡಿದ ಶ್ರೇಯಸ್ಸು ಮಾನ್ಯ ಬಾಬುರಾವ್ ದೇಸಾಯಿಯವರದ್ದಾಗಿದೆ. ಬಾಬೂರಾವ್ ದೇಸಾಯಿಯವರದು ಈಗ 80 ರ ಪ್ರಾಯ. ಆದರೆ ಅವರ ಶ್ರದ್ಧೆ ಉತ್ಸಾಹಗಳು ಯುವಕರಲ್ಲಿ ನವೋತ್ಸಾಹಗಳನ್ನು ತುಂಬುತ್ತಿವೆ. ಹಿರಿಯರು ಕಿರಿಯರು ಎಲ್ಲರೂ ಅವರ ಮಾರ್ಗದರ್ಶನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಮಾನ್ಯ ಸದಾನಂದಜೀಯವರ ಅಭಿನ್ನ ಮಿತ್ರರು. ಇಂತಹ ಮಿತ್ರರು ದೊರೆತದ್ದು ನನ್ನ ಪೂರ್ವಜನ್ಮದ ಪುಣ್ಯವೆಂದು ಮಾನ್ಯ ಸದಾನಂದಜೀಯವರು ಅನೇಕ ಬಾರಿ ಹೇಳಿದ್ದರು.

ಭಗವಂತನು ಮಾನ್ಯ ಸದಾನಂದಜೀಯವರಿಗೆ ಸದ್ಗತಿಯನ್ನು ಕರುಣಿಸಲಿ, ಅವರ ಆಶೀರ್ವಾದ ಎಲ್ಲ ಕಾರ್ಯಕರ್ತರ ಮೇಲಿರಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

**ಇತಿ ಶಂ ಹರಿ ಓಂ.** **(ಹಿಂದಿ ಲೇಖನದ ಅನುವಾದ)**








# ಅವರು ಪಡುವ ಶ್ರಮವೇ ನಮಗೆ ಮಾದರಿಯಾಯಿತು

**– ಬಿ.ಎನ್. ಮೂರ್ತಿ ಬೆಂಗಳೂರು**

**ಕರ್ನಾಟಕ ಆಂಧ್ರಗಳನ್ನೊಳಗೊಂಡ ವಿಶ್ವ ಹಿಂದು ಪರಿಷತ್ತಿನ ನಾಲ್ಕು ಪ್ರಾಂತಗಳ ಕ್ಷೇತ್ರೀಯ ಕಾರ್ಯದರ್ಶಿ**

ದಿವಂಗತ ಸದಾನಂದಜೀ ಅವರ ಮಾರ್ಗದರ್ಶನದಲ್ಲಿ ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಪರಿಷದ್ ಕಾರ್ಯ ಮಾಡುವ ಅವಕಾಶ ದೊರೆತಿದ್ದುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಈ ದೀರ್ಘ ಸಮಯದಲ್ಲಿ ಅವರೊಡನೆ ಪ್ರವಾಸ ಮಾಡಿದ್ದೇನೆ. ಚರ್ಚೆ ಮಾಡಿದ್ದೇನೆ, ಸಲಹೆ ಪಡೆದಿದ್ದೇನೆ, ಸಹಾಯ ಪಡೆದಿದ್ದೇನೆ. ಇವೆಲ್ಲವೂ ನನಗೆ ಬಹಳ ಉಪಯುಕ್ತವಾಗಿವೆ.

ಅವರೆಂದೂ ಸಣ್ಣದಾಗಿ ಯೋಚಿಸುತ್ತಿರಲಿಲ್ಲ. ಸಣ್ಣ ಗುರಿ ಇಟ್ಟುಕೊಳ್ಳುತ್ತಿರಲಿಲ್ಲ. ದೊಡ್ಡದು, ಕಷ್ಟಪಟ್ಟು ಸಾಧಿಸಬಹುದಾದುದನ್ನಿಟ್ಟುಕೊಂಡು ಬಹುತೇಕ ಯಶಸ್ವಿಯಾಗುತ್ತಿದ್ದರು. "ಸಣ್ಣದನ್ನು ಯಾರಾದರೂ ಮಾಡಬಹುದು. ಅದನ್ನು ನಾವೂ ಮಾಡುವುದೇ? ನಾವು ನಮ್ಮ ಶಕ್ತಿಗೆ ಮಿರಿದ್ದನ್ನು ಯೋಚಿಸಿ, ಯಶಸ್ವಿಯಾಗಬೇಕೆಂಬುದು" ಅವರ ನಿಲುವಾಗಿತ್ತು.

1978ರಲ್ಲಿ ಶಿವಮೊಗ್ಗದಲ್ಲಿ ಪರಿಷತ್ತಿನ ಪ್ರಾಂತೀಯ ಅಭ್ಯಾಸ ವರ್ಗ ನಡೆಯಿತು. ಆಗ ಅವರ ಹತ್ತಿರದಲ್ಲಿ ಕೆಲಸ ಮಾಡುವ ಮೊದಲ ಅವಕಾಶ ಸಿಕ್ಕಿತು. ಅದಕ್ಕೆ ಅವರು ಸುಮಾರು 20 ಸ್ವಾಮಿಗಳು, ಸಂಘದ ಹಿರಿಯರು ಮತ್ತು ಪರಿಷತ್ತಿನ ಪದಾಧಿಕಾರಿಗಳನ್ನು ಆಹ್ವಾನಿಸಿದ್ದರು. ಆಹ್ವಾನಿತರೆಲ್ಲರೂ ಅನುಭವಿಗಳು, ಉತ್ತಮ ವಾಗ್ಮಿಗಳು, ವಿಶೇಷ ಸಂದೇಶ ನೀಡಬಲ್ಲವರು. ಅವರಿಗೆ ಸಮಯ ಕೊಡುವುದೇ ಕಷ್ಟವಾಯಿತು, ದಿನದಲ್ಲಿ ಸುಮಾರು 9 ಗಂಟೆಗಳ ಭಾಷಣಗಳ ಅವಧಿಗಳಿದ್ದುವು. ಇದೆಲ್ಲ ಸರಿಯೇ! ಆದರೆ ಶ್ರೀಮೈ ನ ನಾಗರಾಜರಿಗೆ ಮತ್ತು ನನಗೆ ಸದಾನಂದಜಿ ಅವರ ಆದೇಶ ಹೀಗಿತ್ತು. "ಎಲ್ಲ ಭಾಷಣಗಳ ವರದಿ ಬರೆದುಕೊಂಡು ಅದರ ಉತ್ತಮ ಪ್ರತಿ ತಯಾರಿಸಿ ಅಂದೇ, ಕೊಟ್ಟೇ ಮಲಗಬೇಕೆಂದು". ನಮಗೆ ಬೇರೆ ದಾರಿಯಿರಲಿಲ್ಲ. ಆಜ್ಞೆ ಪಾಲಿಸಿದೆವು. ಪರಿಣಾಮ ನಮಗೆ ಎಲ್ಲರೂ ಮಲಗಿದ ನಂತರ 3–4 ಗಂಟೆಗಳ ಕೆಲಸವಾಯಿತು. ಇದು ನಮಗೆ ಸವಾಲಾಗಿದ್ದರೂ ಕೊನೆಗೆ ಸಂತೋಷವೂ ಆಯಿತು.

1979ರಲ್ಲಿ ವಿಶ್ವಹಿಂದು ಪರಿಷತ್ತಿನ ಎರಡನೇ ಸಮ್ಮೇಳನ ಪ್ರಯಾಗದಲ್ಲಿ ನಡೆಯಿತು. ಅದರಲ್ಲಿ ಕರ್ನಾಟಕದಿಂದ 3000 ಪ್ರತಿನಿಧಿಗಳು ಭಾಗವಹಿಸಿದ್ದರು. ಆ ಸಲುವಾಗಿ ನಡೆದ ಭಾರಿ ಪ್ರಯತ್ನದಲ್ಲಿ ಸದಾನಂದಜೀ ಅವರ ಪಾಲು ದೊಡ್ಡದಾಗಿತ್ತು. ಬಹುತೇಕ ಜಿಲ್ಲೆಗಳು ಪ್ರತಿನಿಧಿತವಾಗಿದ್ದವು. ಮಹಿಳೆಯರೂ ಮತ್ತು ಸಮಾಜದ ಎಲ್ಲ ವರ್ಗಗಳ ಜನ ಹಾಗೂ ಪ್ರಮುಖರು ಇದ್ದರು. ಅದೇ ಸಂದರ್ಭದಲ್ಲಿ ವಿಶೇಷ ರೈಲಿನಲ್ಲಿ ಭಾರತದರ್ಶನದ ಪ್ರವಾಸವೂ ಆಯಿತು. ಅದರಲ್ಲಿ 900ಕ್ಕೂ ಹೆಚ್ಚು ಜನ ಇದ್ದರು. ರೈಲು ಚಲಿಸುತ್ತಿರುವಾಗಲೇ ಸೀಮೆಎಣ್ಣೆಯ ಸ್ಟೋವ್‌ಗಳಲ್ಲಿ ಅಡುಗೆ ಮಾಡಿ ಆಹಾರ ವಿತರಣೆಯನ್ನು ನಮ್ಮ ಕಾರ್ಯಕರ್ತರೇ ಮಾಡುತ್ತಿದ್ದರು. ಈಗಲೂ ಆ ರೈಲಿನ ಪ್ರವಾಸವನ್ನು ನೆನಸಿಕೊಳ್ಳುವ ನೂರಾರು ಕಾರ್ಯಕರ್ತರಿದ್ದಾರೆ. ಸದಾನಂದಜೀ ಅವರು ವಿಶೇಷ ರೈಲಿಗೆ ಮತ್ತು ಇತರೆ ಪ್ರತಿನಿಧಿಗಳನ್ನು ಹೊರಡಿಸುವ ಪ್ರಯತ್ನದಲ್ಲಿ ಮುಖ್ಯ ಪಾತ್ರವಹಿಸಿದ್ದರು. ವಿಶ್ವ ಸಮ್ಮೇಳನವು ತ್ರಿವೇಣಿ ಸಂಗಮದ ಕ್ಷೇತ್ರದಲ್ಲಿ ಏರ್ಪಾಡಾಗಿತ್ತು. 3000 ಜನಗಳಿಗೊಂದರಂತೆ ಸಭಾಮಂಟಪ,

ಪ್ರತ್ಯೇಕ ವಸತಿ, ಶೌಚ, ಸ್ನಾನದ ಶಿಬಿರಗಳ ಯೋಜನೆ ಆಗಿತ್ತು. ಅದರ ನಿರ್ಮಾಣಕ್ಕೆ ಸದಾನಂದಜೀ ಅವರ ನೇತೃತ್ವದಲ್ಲಿ ಶ್ರೀ ಸುಬ್ಬು ಶ್ರೀನಿವಾಸ ಮತ್ತು ನಾನು ಹೋಗಿದ್ದೆವು. ಡೇರೆಗಳನ್ನು ಹಾಕಲು ಸ್ಥಳ ಗುರ್ತಿಸಿ ಸುಣ್ಣದ ಪಟ್ಟಿ ಎಳೆದು, ನೀರಿನ, ದೀಪದ, ವ್ಯವಸ್ಥೆ ಮಾಡುವ ಕೆಲಸ ಮಾಡಬೇಕಾಗಿತ್ತು. ಅದು ಮಾಘ ಸ್ನಾನದ ಕಾಲ. ವಿಪರೀತ ಚಳಿ ಮತ್ತು ನದಿಯಿಂದ ತಣ್ಣನೆ ಗಾಳಿಯೂ ಬೀಸುತ್ತಿತ್ತು. ಮೊದಲ ದಿನದ ಬೆಳಿಗ್ಗೆ ನನಗೆ ಉಸಿರಾಡುವುದೇ ಕಷ್ಟವಾಯಿತು. ನನ್ನ ಸ್ಥಿತಿ ನೋಡಿ ನನಗಿಂತ 30 ವರ್ಷ ಹಿರಿಯರಾದ ಸದಾನಂದಜೀ ಅವರು ಸುಮಾರು 1 1/2 ಕಿ.ಮೀ ದೂರವಿರುವ ನಮ್ಮ ಕೇಂದ್ರದ ಶಿಬಿರಕ್ಕೆ ಹೋಗಿ ರಜಾಯಿ ತಂದು ಹೊದಿಸಿ, ಶುಶ್ರೂಷೆ ಮಾಡಿದುದನ್ನು ನಾನೆಂದಿಗೂ ಮರೆಯಲಾರೆ.

1988ರ ಪ್ರಾಂತೀಯ ದ್ವಿತೀಯ ಸಮ್ಮೇಳನ ಮಾಡಬೇಕೆಂದು 82ರಲ್ಲೇ ಎಲ್ಲರೊಂದಿಗೆ ಸೇರಿ ನಿಶ್ಚಯಿಸಿ ಕೆಲಸ ಪ್ರಾರಂಭಿಸಿದ್ದೆವು. 1 ಲಕ್ಷ ಪ್ರತಿನಿಧಿಗಳ ಗುರಿ. ಧರ್ಮಾಚಾರ್ಯರ. ಮಹಿಳೆಯರ, ವಿವಿಧ ತಜ್ಞರ, ಯುವಕರ ಇತ್ಯಾದಿ ಸಮಾವೇಶಗಳನ್ನು ನಡೆಸಬೇಕೆಂದೂ, ಎಲ್ಲವೂ ಅಚ್ಚುಕಟ್ಟಾಗಿರಬೇಕೆಂದೂ, ನಿರ್ಧಾರವಾಯಿತು.ಧರ್ಮಸ್ಥಳದಲ್ಲಿ ಪೂಜ್ಯ ಶ್ರೀ ವೀರೇಂದ್ರ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ರಚಿಸಿ ಕೆಲಸ ಪ್ರಾರಂಭವಾಯಿತು. ಜಿಲ್ಲೆಗಳಲ್ಲಿ, ವಿವಿಧ ಕೇಂದ್ರಗಳಲ್ಲಿ ಸಿದ್ಧತಾ ಸಭೆಗಳು ಪ್ರಾರಂಭವಾದವು. ಎಲ್ಲವೂ ಚೆನ್ನಾಗಿ ನಡೆಯುತ್ತಿದ್ದು ಉತ್ಸಾಹದಲ್ಲಿದ್ದಾಗ, ಕೇಂದ್ರವು ಏಕಾತ್ಮತಾ ಯಾತ್ರೆಯ ಯೋಜನೆ ಮಾಡಿತು. ಆ ಯೋಜನೆ ಪ್ರಕಾರ ಭಾರತದ ಮೂಲೆ ಮೂಲೆಗಳಿಗೆ ಭಾರತಮಾತೆಯ ವಿಗ್ರಹ ಮತ್ತು ಗಂಗಾಜಲದ ಒಂದು ದೊಡ್ಡ ಕಳಸದ ಯಾತ್ರೆ ಹೋಗಬೇಕಿತ್ತು. ಆಗ ಸ್ವಾಗತದ ಕಾರ್ಯಕ್ರಮದ ಜೊತೆಗೆ ಸ್ಥಳೀಯ ನದಿ, ಕಲ್ಯಾಣಿ ಇತ್ಯಾದಿಗಳ ಪವಿತ್ರ ಜಲ ತಂದು ಕಳಸಕ್ಕೆ ಸೇರಿಸಬೇಕಾಗಿತ್ತು. ಕೊನೆಗೆ ಭಾರತಮಾತೆ ಹಾಗೂ ಗಂಗಾಜಲದ ಕಳಸವಿರುವ ರಥ; ರಾಮೇಶ್ವರ, ಸೋಮನಾಥ, ಪಶುಪತಿನಾಥಕ್ಕೆ ಹೋಗುವ ಯೋಜನೆ ಅದಾಗಿತ್ತು. ಆ ಯಾತ್ರೆ ಕರ್ನಾಟಕಕ್ಕೆ ಬರುವ ದಿನಗಳಲ್ಲೇ ನಮ್ಮ ದ್ವಿತೀಯ ಪ್ರಾಂತ ಸಮ್ಮೇಳನ ನಿಶ್ಚಯವಾಗಿ ಸಿದ್ಧತೆ ನಡೆದಿತ್ತು. ಇದೊಂದು ದೊಡ್ಡ ಸವಾಲು ಆಯಿತು. ಕೊನೆಗೆ ಸದಾನಂದಜೀ ಅವರು ರಥ, ಧರ್ಮಸ್ಥಳಕ್ಕೇ (ಸಮ್ಮೇಳನ ಸ್ಥಾನ) ಬರಲೆಂದೂ, ಅಲ್ಲಿಗೆ ಬರುವ ರಾಜ್ಯದ ವಿವಿಧ ಸ್ಥಳಗಳ ಪ್ರತಿನಿಧಿಗಳು ಅಲ್ಲಿಗೇ ಜಲ ತಂದು ಕಳಸಕ್ಕೆ ಸೇರಿಸಿ ತಾವು ತಂದಿದ್ದ ಕಳಸದಲ್ಲೇ ತಮ್ಮೂರುಗಳಿಗೂ ತೀರ್ಥವನ್ನು ತೆಗೆದುಕೊಂಡು ಹೋಗಿ ಕಾರ್ಯಕ್ರಮ ಮಾಡುವ ಸಲಹೆ ನೀಡಿ ಸಮಸ್ಯೆಯನ್ನು ಬಗೆಹರಿಸಿದರು. ಸಮ್ಮೇಳನವೂ ಆಯಿತು. ಏಕಾತ್ಮತಾ ಯಾತ್ರೆಯ ಕಾರ್ಯಕ್ರಮವೂ ಚೆನ್ನಾಗಿ ಆಯಿತು.

ಅವರು ಉತ್ತಮ ಕಲಾಕಾರರೂ ಆಗಿದ್ದರು. ಧರ್ಮಶ್ರೀ ಕಟ್ಟಡದ ಮೊದಲ ಮಹಡಿಯ ಗೋಡೆಯಲ್ಲಿ – ಕೊರೆದಿರುವ ಶಿಲಾ ಲೇಖ ಅವರದ್ದೇ ಡ್ರಾಯಿಂಗ್. ಅವರು ನೀರಿನ ಮೇಲೆ ತೇಲುವ ರಂಗೋಲಿ ಹಾಕುತ್ತಿದ್ದರು. ದ್ವಿತೀಯ ಪ್ರಾಂತೀಯ ಸಮ್ಮೇಳನದ ವೇದಿಕೆಯ ಬ್ಯಾನರ್ ತಯಾರಿಕೆಯಲ್ಲಿ ಹಾಗೂ ಅನ್ಯ ಸಂದರ್ಭಗಳಲ್ಲಿ ಸದಾನಂದಜೀ ಅವರನ್ನು ಒಪ್ಪಿಸಲು 'ಪ್ರಖ್ಯಾತ ಕಲಾಕಾರ ಶ್ರೀ ಬಿ.ಕೆ.ಎಸ್. ವರ್ಮಾ ಶ್ರಮ ಪಡುತ್ತಿದ್ದುದನ್ನು ಮತ್ತು ಒಪ್ಪಿದಾಗ ಸಂತೋಷಪಟ್ಟಿದುದನ್ನು ನಾವೆಲ್ಲ ನೋಡಿದ್ದೇವೆ.

ಸದಾನಂದಜೀ ಅವರು ಅಶಿಸ್ತನ್ನು ಎಂದೂ ಸಹಿಸಿದವರಲ್ಲ. ಸ್ವತಃ ಶಿಸ್ತು ಪಾಲಿಸುವುದರಲ್ಲೂ ಅವರು ಮುಂದೇ. ಸಂಘಟನೆಯ ಕೆಲಸಕ್ಕಾಗಿ ಶಾರೀರಿಕವಾಗಿ ಕಷ್ಟಪಡುವುದನ್ನು ಅವರಿಂದ ಕಲಿಯಬೇಕು. ಇದಕ್ಕೆ ಒಂದು ಉದಾಹರಣೆ ಎಂದರೆ ಒಂದೇ ವಾರದಲ್ಲಿ ಬೆಂಗಳೂರಿನಿಂದ

ಮಡಿಕೇರಿ – ಮಂಗಳೂರು – ಬೆಂಗಳೂರು – ಹುಬ್ಬಳ್ಳಿ – ಗುಲ್ಬರ್ಗ – ಶಿವಮೊಗ್ಗಗಳಿಗೆ ಅವರು ಪ್ರವಾಸ ಹೋಗಿ ಬರುತ್ತಿದ್ದರು. ಎಲ್ಲೆಡೆ ಬೈಠಕ್‌ಗಳು, ಸಂಪರ್ಕ, ಬಟ್ಟೆ ಒಗೆಯುವುದು ಆಗುತ್ತಿತ್ತು. ಇದಕ್ಕೆ ಬೇಸಿಗೆ ಮಳೆಗಾಲಗಳು ಅಡ್ಡಿ ಆಗುತ್ತಿರಲಿಲ್ಲ. ಅವರಂತೆ ಪ್ರವಾಸ ಮಾಡುವವರು ಸಹಜವಾಗಿ ಕಡಿಮೆಯೇ। ಅವರು ವಯಸ್ಸು 87ರ ನಂತರವೂ ಪ್ರವಾಸ ಮಾಡುತ್ತಿದ್ದುದನ್ನು ನೋಡಿದ್ದುದರಿಂದ ಈಗಿನ ಕಾರ್ಯಕರ್ತರು ನಂಬುವಂತಾಗಿದೆ.

ಅವರ ಜವಾಬ್ದಾರಿ ಅಖಿಲ ಭಾರತ ಮಟ್ಟದಲ್ಲಿ 70ನೇ ವಯಸ್ಸಿನ ನಂತರ ಹೆಚ್ಚಾಗುತ್ತಾ ಹೋಯಿತು. ನಿಜವಾಗಿ ನೋಡಿದರೆ ಆಗ ಜವಾಬ್ದಾರಿ ಕಡಿಮೆ ಆಗಬೇಕು. ಅಂತಹುದರಲ್ಲಿ ಅವರು ಹೆಚ್ಚಿನ ಜವಾಬ್ದಾರಿಯನ್ನು ಉತ್ಸಾಹದಿಂದ ನಿರ್ವಹಿಸಿದರು. ನಮಗೆಲ್ಲರಿಗೂ ಅವರ ಉತ್ಸಾಹ ಒಂದು ದೊಡ್ಡ ಪಾಠವೆನಿಸುತ್ತದೆ. ಉತ್ಸಾಹ ರಹಿತ ಜೀವನದಲ್ಲಿ ಏನೂ ಸಾಧಿಸಲಾಗದಲ್ಲವೇ?

ಅವರ ಶ್ರಮಕ್ಕೆ ಮಿತಿಯೇ ಇರಲಿಲ್ಲ. ಜೊತೆಯವರೂ ಹಾಗೇ ಶ್ರಮ ಪಡಬೇಕೆಂದು ಅಪೇಕ್ಷಿಸುತ್ತಿದ್ದುದು ಮಾತ್ರ ಕಷ್ಟವೆನಿಸುತ್ತಿತ್ತು. ಆದರೂ ನಾವು ಮಾಡುತ್ತಿದ್ದೆವು. ಏಕೆಂದರೆ ಮಾಡಬೇಕೆನಿಸುತ್ತಿತ್ತು.








# ಪ್ರಾರಂಭದಲ್ಲೇ ಸದಾನಂದರ ಛಾಪು

















# ಬೃಹತ್ ಕಾರ್ಯಕ್ರಮಗಳ ಯೋಜಕ, ದಕ್ಷ ನಿರ್ವಾಹಕ ಸದಾನಂದಜೀ

**– ಕೇಶವ ಹೆಗಡೆ, ಹುಬ್ಬಳ್ಳಿ**

**ವಿಶ್ವ ಹಿಂದು ಪರಿಷದ್ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತಗಳ ಸಂಘಟನಾ ಕಾರ್ಯದರ್ಶಿ**

ದೊಡ್ಡ ಕಾರ್ಯಕ್ರಮಗಳನ್ನು ಕಲ್ಪಿಸಿಕೊಳ್ಳುವುದು – ಆಯೋಜಿಸುವುದು ಹಾಗೂ ಯಶಸ್ವಿಗೊಳಿಸುವುದು ಇದು ಸದಾನಂದಜಿಯವರ ಹವ್ಯಾಸವಾಗಿದ್ದಿತ್ತು. ಅಂತಹ ಕಾರ್ಯಕ್ರಮಗಳು ಬಂದರೆ ಅದನ್ನು ರೂಪಿಸುವ ಸದಾನಂದಜಿಯವರ ಉತ್ಸಾಹ ಮತ್ತು ಛಲ ಜಾಗೃತಗೊಳ್ಳುತ್ತಿತ್ತು. ಅದನ್ನು ಯಶಸ್ವಿಗೊಳಿಸುವ ಕಲೆಯಲ್ಲಿ ಅವರು ಸಿದ್ಧಹಸ್ತರು. ಬೃಹತ್ ಕಾರ್ಯಕ್ರಮಗಳನ್ನೇ ಕಲ್ಪಿಸಿಕೊಂಡು ಸಮಗ್ರವಾಗಿ ಚಿಂತಿಸಿ ಯೋಜನೆಗಳನ್ನು ಸಿದ್ಧಪಡಿಸಿ ಅದರ ನಿರ್ವಹಣೆಗೂ ಮುಂದಾಳಾಗಿ ನಿಲ್ಲುತ್ತಿದ್ದುದು ಸದಾನಂದಜೀಯವರ ವಿಶೇಷತೆ.

ಪ್ರತಿಯೊಂದರಲ್ಲೂ ಅವರು ತನ್ನದೇ ಆದ ವಿಶಿಷ್ಟ ಕಲ್ಪನೆಗಳನ್ನು ಮುಂದಿಡುತ್ತಿದ್ದರು. ಸಮ್ಮೇಳನಗಳ ಸಿದ್ಧತೆ, ವ್ಯವಸ್ಥೆ, ವೇದಿಕೆ, ನಗರಗಳ ನಿರ್ಮಾಣ ಇತ್ಯಾದಿಗಳು ಹೇಗಿರಬೇಕೆಂದು ಅದರ ನಕ್ಷೆಗಳನ್ನು ತಾನೇ ಸಿದ್ಧಪಡಿಸಿ ಕೊಡುವುದರಿಂದ ಹಿಡಿದು ಅದು ನಿರ್ಮಾಣಗೊಳ್ಳುವವರೆಗೆ ಎದುರಲ್ಲಿ ನಿಂತು ಮಾಡಿಸುತ್ತಿದ್ದರು.

1969ರಲ್ಲಿ ಉಡುಪಿಯ ಪ್ರಥಮ ಪ್ರಾಂತೀಯ ಸಮ್ಮೇಳನದ ಸಂದರ್ಭದಲ್ಲಿ ಮಾನ್ಯ ಶ್ರೀ ಕೃ ಸೂರ್ಯ ನಾರಾಯಣರಾಯರು ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು. ಆಗ ಉತ್ತರ ಕರ್ನಾಟಕದ ಹಾಗೂ ನೆರೆಯ ಪ್ರಾಂತಗಳ ಪ್ರತಿನಿಧಿಗಳನ್ನು ಕರೆತರುವ ಜವಾಬ್ದಾರಿ ಸದಾನಂದಜಿಗೆ ಇದ್ದಿತ್ತು. ಈ ಸಮ್ಮೇಳನದ ನಂತರ ಸದಾನಂದಜಿಯವರ ಸೇವೆಯನ್ನು ಪರಿಷತ್ತಿನ ಕಾರ್ಯಕ್ಕೆ ನೀಡಲಾಯಿತು. ಹೀಗಾಗಿ ಸದಾನಂದಜಿಯವರ ಪರಿಷತ್ ಪ್ರವೇಶಕ್ಕೆ ಉಡುಪಿಯ ಸಮ್ಮೇಳನ ನಾಂದಿಹಾಡಿತು.

1971–78ರ ನಡುವೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ಸಮ್ಮೇಳನಗಳನ್ನು ಮಾನ್ಯ ಸದಾನಂದಜಿಯವರು ಸಂಘಟಿಸಿದರು. ಪರಿಷತ್ ಕಾರ್ಯಕ್ಕೆ ರಭಸ ನೀಡಲು, ಜಿಲ್ಲೆಯಿಂದ ತಾಲೂಕು ಕೇಂದ್ರಗಳಿಗೆ ಕಾರ್ಯವನ್ನು ವಿಸ್ತರಿಸಲು ಹಾಗೂ ದೊಡ್ಡ ಪ್ರಮಾಣದಲ್ಲಿ ಜನ ಸಮುದಾಯವನ್ನು ಪರಿಷತ್ತಿನ ಕಡೆಗೆ ಸೆಳೆಯಲು ಈ ಸಮ್ಮೇಳನಗಳು ಕಾರಣವಾದವು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ, ಹಾಸನ ಜಿಲ್ಲೆಯ ಸಮ್ಮೇಳನ ಅರಸೀಕೆರೆಯಲ್ಲಿ ಬೆಂ. ಗ್ರಾಮಾಂತರ ಜಿಲ್ಲೆಯ ಸಮ್ಮೇಳನ ದೊಡ್ಡಬಳ್ಳಾಪುರದಲ್ಲಿ, ಧಾರವಾಡ ಜಿಲ್ಲೆಯದ್ದು ಹಾವೇರಿಯಲ್ಲಿ, ಬೆಂಗಳೂರು ಮಹಾನಗರದ್ದು ವಾಸವಿ ಮಹಲ್‌ನಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯಕ್ರಮ ಮಂಗಳೂರಿನಲ್ಲಿ ನೆರವೇರಿದವು. ಅವಿರತ ಪರಿಶ್ರಮ ಅದ್ಭುತ ಸಂಘಟನೆಯ ಕೌಶಲ ಅವರದ್ದೇ

ವೈಶಿಷ್ಟ್ಯವಾಗಿತ್ತು. 1983ರ ಡಿಸೆಂಬರ್‌ನಲ್ಲಿ ಧರ್ಮಸ್ಥಳದ ಉಜಿರೆಯಲ್ಲಿ ಪರಿಷತ್ತಿನ ದ್ವಿತೀಯ ಪ್ರಾಂತೀಯ ಸಮ್ಮೇಳನದ ಯೋಜನೆ ಆದಾಗ ಧರ್ಮಸ್ಥಳದ ಡಾ। ವೀರೇಂದ್ರ ಹೆಗ್ಗಡೆಯವರ ಕೃಪಾಶ್ರಯದಲ್ಲಿ ಶ್ರೀ ಅಜಿತ್ ಕುಮಾರ್‌ರವರು ಪ್ರಧಾನ ಕಾರ್ಯದರ್ಶಿಗಳಾಗಿ ಸಮ್ಮೇಳನದ ವ್ಯವಸ್ಥೆಯಾಗಿತ್ತು. 65 ಸಹಸ್ರಕ್ಕೂ ಮಿಕ್ಕಿ ಪ್ರತಿನಿಧಿಗಳು 3 ದಿನ ಭಾಗವಹಿಸಿದ್ದ ವ್ಯವಸ್ಥೆಗಾಗಿ 16 ವಸತಿನಗರಗಳನ್ನು ನಿರ್ಮಿಸಿದ್ದರು. 177 ವಿವಿಧ ಮತ ಸಂಪ್ರದಾಯಗಳ ಧರ್ಮಾಚಾರ್ಯರು ವೇದಿಕೆಯನ್ನು ಅಲಂಕರಿಸಿದ್ದರು. ಇದೇ ಸಂದರ್ಭ ಪ್ರಥಮ ಏಕಾತ್ಮಾತಾ ರಥಯಾತ್ರೆಯು ಗಂಗಾಮಾತೆ ಭಾರತಮಾತೆಯರನ್ನು ಹೊತ್ತು ಸಮ್ಮೇಳನದ ಸ್ಥಳಕ್ಕೆ ನೇರವಾಗಿ ಆಗಮಿಸಿತ್ತು. ಸಮ್ಮೇಳನದ ಸ್ಥಾನದಲ್ಲಿ ಐತಿಹಾಸಿಕವಾದ ಅಭೂತಪೂರ್ವ ವಸ್ತು ಪ್ರದರ್ಶನದ ವ್ಯವಸ್ಥೆ ಮಾಡಲಾಗಿತ್ತು. ಇವೆಲ್ಲವುಗಳನ್ನು ಅತ್ಯಂತ ಸಮರ್ಥವಾಗಿ ಯಶಸ್ವಿಯಾಗಿ ನಿರ್ವಹಿಸಿದುದು ಮಾನ್ಯ ಸದಾನಂದ ಕಾಕಡೆಯವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಎಂಬುದು ಉಲ್ಲೇಖನೀಯ

ಅದೇ ರೀತಿ ತಿರುಪತಿ ಸಮೀಪದ ರೇಣುಗುಂಟದಲ್ಲಿ ಆಂಧ್ರಪ್ರದೇಶದ ಪ್ರಾಂತೀಯ ಸಮ್ಮೇಳನ, ಮಹಾರಾಷ್ಟ್ರದ ಆಳಂದಿಯಲ್ಲಿ ಮಹಾರಾಷ್ಟ್ರ ಪ್ರಾಂತೀಯ ಸಮ್ಮೇಳನಗಳು ಅದ್ದೂರಿಯಾಗಿ ಯಶಸ್ವಿಯಾಗಿ ಮಾನ್ಯ ಸದಾನಂದಜಿಯವರ ನೇತೃತ್ವದಲ್ಲಿ ನೆರವೇರಿದವು.

1985ರ ಅಕ್ಟೋಬರ್‌ನಲ್ಲಿ ನಡೆದ ಧರ್ಮಸಂಸತ್ತಿನ ಅಧಿವೇಶನವು ಮಾನ್ಯ ಸದಾನಂದಜೀಯವರ ನೇತೃತ್ವದಲ್ಲಿ ಪರ್ಯಾಯ ಪೀಠಾಧೀಶರಾದ ವಿಶ್ವೇಶ್ವತೀರ್ಥ ಶ್ರೀಪಾದರ ಕೃಪಾಶ್ರಯದಲ್ಲಿ ನೆರವೇರಿತು. ಅಯೋಧ್ಯೆ ಶ್ರೀರಾಮಜನ್ಮಭೂಮಿ ಆಂದೋಳನದ ಕುರಿತು ಮಹತ್ವದ ನಿರ್ಧಾರಕೈಗೊಳ್ಳುವ ಅಧಿವೇಶನ ಅದಾಗಿತ್ತು. ಇಡೀ ದೇಶದ ವಿವಿಧ ಪ್ರಾಂತಗಳಿಂದ ವಿವಿಧ ಸಂಪ್ರದಾಯಗಳಿಂದ 850ಕ್ಕೂ ಹೆಚ್ಚು ಧರ್ಮಾಚಾರ್ಯಗಳು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಈ ರೀತಿ ಸಂತರು ಬಂದು ಅಧಿವೇಶನ ನಡೆಸುವುದು, ಅವರವರಿಗೆ ತಕ್ಕ ಆದರಾತಿಥ್ಯಗಳನ್ನು ಭಕ್ತಿಗೌರವಪೂರ್ವಕವಾಗಿ ನೀಡುವುದು, ಸ್ವಾಗತ, ವಸತಿ, ಓಡಾಟದ ವ್ಯವಸ್ಥೆಗಳು ಇತ್ಯಾದಿ ಹತ್ತು ಹಲವು ಹೊಸತುಗಳನ್ನು ಕಲ್ಪಿಸಿಕೊಂಡು ಯೋಚಿಸಿ, ವಿವಿಧ ಸಂಘಟನೆಗಳ ಸಹಯೋಗಗಳನ್ನು ಪಡೆಯಲು ತಕ್ಕ ಕಾರ್ಯಕರ್ತರನ್ನು ನಿಯೋಜಿಸಿ ಅದನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ಶ್ರೀ ಸದಾನಂದಜಿಯವರದ್ದೇ ಆಗಿದೆ.

## ಶರೀರ ದಣಿದರೂ ಬಲವತ್ತರವಾದ ಕಳಕಳಿ





# ಅವರಿಗೆ ಹಿಂದುದೇಶ–ಹಿಂದೂಸಮಾಜ ಅವುಗಳ ಅಖಂಡತೆ ಬಿಟ್ಟು ಬೇರೆ ಪರಿವೆಯೇ ಇರಲಿಲ್ಲ

**'ಸದಾನಂದ' ಲೋಕಾರ್ಪಣೆ ಮಾಡಿದ**
**ಡಾ|| ಡಿ.ವೀರೇಂದ್ರ ಹೆಗ್ಗಡೆಯವರ ಶುಭನುಡಿಗಳ ಚುಟುಕು ರೂಪ**

ಸದಾನಂದ ಕಾಕಡೇಜಿಯವರ ಪರಿಚಯವಾದಂದಿನಿಂದ ಅವರನ್ನು ನಾನು ನೋಡಿದಾಗಲೆಲ್ಲ; ನನಗೆ ಅನಿಸುತ್ತಿದ್ದುದು; ಅವರಿಗೆ ದೇಶ ಮತ್ತು ದೇಶದ ಅಖಂಡತೆ, ಹಿಂದು ಸಮಾಜ ಮತ್ತು ಹಿಂದು ಸಮಾಜದ ಅಖಂಡತೆಯನ್ನು ಬಿಟ್ಟು ಬೇರೆ ಯಾವ ವಿಚಾರದ ಬಗೆಗೂ ಚಿಂತೆಯೇ ಇರಲಿಲ್ಲ. ಲೌಕಿಕವಾದ ಬ್ಯಾಂಕ್ ಠೇವಣಿಗಳು ಅವನ್ನು ಬೆಳೆಸುವುದು, ಅದನ್ನು ಇನ್ನೊಂದು ಖಾತೆಗೆ ಬದಲಾಯಿಸುವುದು. ಇಂತಹ ಯಾವುದೇ ಜಂಜಾಟಗಳು ಅವರಿಗಿರಲಿಲ್ಲ.

ಅವರು ವರ್ಷದಲ್ಲಿ ಎರಡು ಬಾರಿ ಧರ್ಮಸ್ಥಳಕ್ಕೆ ಬರುತ್ತಿದ್ದರು. ಬಂದವರು ನನ್ನ ಬಳಿ ಕುಳಿತು ಇಡೀ ದೇಶದ ಪರಿಸ್ಥಿತಿ ಅದರ ಬಗ್ಗೆ ಅವರ ಟಿಪ್ಪಣಿ, ಅದನ್ನು ವಿವರಿಸಿ ಹೇಳಲು ಪತ್ರಿಕೆಗಳು, ಪುಸ್ತಕಗಳು ಇತ್ಯಾದಿ ಎಲ್ಲವನ್ನು ತಂದು ವರದಿ ಒಪ್ಪಿಸುತ್ತಿದ್ದರು. ಅಂತಹ ಸಮಯದಲ್ಲಿ ನನಗೆ ಬಹಳಷ್ಟು ವಿಚಾರಗಳು ತಿಳಿದು ಬರುತ್ತಿದ್ದವು.

ಉಡುಪಿಯಲ್ಲಿ ಪರಿಷದ್‌ನ ಮೊದಲ ಸಮ್ಮೇಳನ ನಡೆದಾಗ ನನಗಿನ್ನೂ 21 ವರ್ಷ. ಅಕಸ್ಮಾತ್ತಾಗಿ ನಮ್ಮ ತಂದೆಯವರು ಸ್ವರ್ಗಸ್ಥರಾದುದರಿಂದ, ನನಗೆ ಪಟ್ಟವಾಗಿತ್ತು. ಮಾನಸಿಕವಾಗಿ ನಾನಿನ್ನೂ ಅದಕ್ಕೆ ಸಿದ್ಧನಿರಲಿಲ್ಲ ಹಾಗಾಗಿ ಉಡುಪಿಯ ಸಮ್ಮೇಳನವು ನನಗೊಂದು ರೀತಿಯ ತರಬೇತಿ ಶಿಬಿರದಂತಾಯಿತು.

ಆಮೇಲಿನ ಧರ್ಮಸ್ಥಳದ ಸಮ್ಮೇಳನದಲ್ಲಿ 60 ಸಾವಿರ ಪ್ರತಿನಿಧಿಗಳು ಬಂದುದು. 18 ನಗರಗಳ ನಿರ್ಮಾಣವಾಗಿ ವಸತಿಗಾಗಿ ಟೆಂಟ್‌ಗಳು ಮತ್ತು 1 ಲಕ್ಷ ಜನರ ಭಾಗವಹಿಸುವಿಕೆ ಇವೆಲ್ಲವೂ ಮೈ ಜುಮ್ಮೆನ್ನಿಸುವ ಅನುಭವವಾಗಿ ಪರಿಣಮಿಸಿತು ಪರಿಷದ್ ಕಾರ್ಯಕರ್ತರು ಸಂಘದ ಕಾರ್ಯಕರ್ತರು ಇವರೆಲ್ಲರ ಸಹಕಾರದಿಂದಾಗಿ ಇಡಿಯ ಸಮ್ಮೇಳನವು ಯಶಸ್ವಿಯಾಗಿತ್ತು.



ಆಗಿನ್ನು ಹಿಂದುತ್ವದ ವಿರುದ್ಧವೆಂಬಂತೆ ಉಳಿದ ಮತಗಳನ್ನು ಓಲೈಸುವ ನೀತಿ

ಆರಂಭವಾಗಿತ್ತು. ಹಾಗಾಗಿ "ನೀವು ಈ ಸಮ್ಮೇಳನವನ್ನು ನಡೆಸಬಾರದು. ಅದರಿಂದಾಗಿ ನೀವು ಒಂದು ಪಕ್ಷದ, ಒಂದು ಗುಂಪಿನ ಪರವಾಗಿದ್ದೀರಿ ಎನ್ನುವ ಭಾವನೆ ಬರುತ್ತದೆ" ಎನ್ನುವ ಒತ್ತಡಗಳೂ ನನ್ನ ಮೇಲೆ ಬಂದಿದ್ದವು.

ಕಾಕಡೇಜಿಯವರು ಇಂತಹ ಒತ್ತಡಗಳ, ವಾತಾವರಣದ ವಿರುದ್ಧ ಕೆಲಸ ಮಾಡಬೇಕಾಗಿತ್ತು. ಅವರಿಗೆ ಮತಾಂತರದ ಸಮಸ್ಯೆ ಬಹಳ ನೋವು ಕೊಡುತ್ತಿತ್ತು. ಅದಕ್ಕಾಗಿ ನಾನು ನಮ್ಮ ಕ್ಷೇತ್ರದ ಯೋಜನೆಯನ್ನು ಅವರಿಗೆ ವಿವರಿಸುತ್ತಿದ್ದೆ. ಬಡತನದಿಂದ ಮತಾಂತರವಾಗುತ್ತದೆ ಎನ್ನುವ ಮಾತು ಕೇಳಬಾರದು ಎನ್ನುವುದಕ್ಕಾಗಿ ಗ್ರಾಮೋದ್ಧಾರ ಯೋಜನೆಯನ್ನು ಪ್ರಾರಂಭಿಸಿದ್ದೇವೆ ಎಂದು ಅವರಿಗೆ ಹೇಳಿದ್ದೆ.

ಇಂದು ರಾಷ್ಟ್ರೀಯ ಕಲ್ಪನೆಯ ಅಭಾವ ಕಾಣುತ್ತಿದೆ. ಪ್ರಾಂತ, ಭಾಷೆ, ಪಕ್ಷಗಳ ಹೆಸರಲ್ಲಿ ಸಮಾಜದ ಉದ್ಧಾರವನ್ನು ಮರೆಯಲು ಪ್ರಾರಂಭಿಸುತ್ತೇವೆ. ಕೇಂದ್ರದ ಹಲವು ಯೋಜನೆಗಳು ರಾಜ್ಯಮಟ್ಟದಲ್ಲಿ ಈ ಕಾರಣದಿಂದ ಅಳವಡಿಸದೆ ಉಳಿಯುತ್ತವೆ. ಅಮೆರಿಕಾದ ಪ್ರವಾಸದಲ್ಲೊಮ್ಮೆ ಅಲ್ಲಿನ ಸಾಮಾನ್ಯ ವಾಹನ ಚಾಲಕನ ತಪ್ಪನ್ನು ನಾವು ಕ್ಷಮಿಸಿದ್ದೇವೆ ಎಂದಾಗ, ಆತನು "ನೀವು ಈಗ ಹಾಗೆ ಹೇಳಬಹುದು. ಆದರೆ ಭಾರತಕ್ಕೆ ಹೋದಾಗ ನೀವು ಅಮೆರಿಕಾದ ಚಾಲಕರ ಬಗ್ಗೆ ಅಸಮಾಧಾನದ ಅಭಿಪ್ರಾಯವನ್ನು ಕೊಡುತ್ತೀರಿ. ಆ ಬಗ್ಗೆ ನನ್ನ ಚಿಂತೆ" ಅಂದಿದ್ದ. ಇಂತಹ ದೇಶಭಕ್ತಿ ನಮಗೆಬೇಕು.

ಇನ್ನು ಜಾತ್ಯಾತೀತತೆಯ ಹಾವಳಿ. ಇಂದಿರಾಗಾಂಧಿಯವರು ಧರ್ಮಸ್ಥಳಕ್ಕೆ ಬಂದಾಗ ಭಕ್ತಿಯಿಂದ ಕಣ್ಮುಚ್ಚಿ ನಿಮಿಷ ಕಾಲ ಪ್ರಾರ್ಥನೆ ಮಾಡಿದರು. ಅವರು ರುದ್ರಾಕ್ಷಿಯನ್ನು ಧರಿಸುತ್ತಿದ್ದರು. ಆದರೆ ಅವರು ಅದನ್ನ ಬಹಿರಂಗವಾಗಿ ತೋರಿಸಿಕೊಳ್ಳುತ್ತಿರಲಿಲ್ಲ. ವಿ.ವಿ. ಗಿರಿಯವರು ಧರ್ಮಸ್ಥಳಕ್ಕೆ ಬರುವ ಮೊದಲು ಅದೇ ಸೆಕ್ಯೂಲರಿಸಂ ಕಾರಣಕ್ಕಾಗಿ ಮಂಗಳೂರಿನಲ್ಲಿ ಚರ್ಚ್ ಮತ್ತು ಮಸೀದಿಯೊಂದಕ್ಕೆ ಹೋಗಿದ್ದರು. ಟಿ.ಎ.ಪೈ.ಯವರು ಗಣೇಶನ ಉಂಗುರವನ್ನು ಧರಿಸುವ ಧೈರ್ಯ ತೋರಿಸಿದುದನ್ನು ಅವರ ಮಂತ್ರಿ ಸಹೋದ್ಯೋಗಿಗಳು ಭಯದಿಂದ ಗೌರವಿಸುತ್ತಿದ್ದರು.

ಸದಾನಂದಜಿ ಇಂತಹುದನ್ನೆಲ್ಲ ಎದುರಿಸಬೇಕಾಗುತ್ತಿತ್ತು. ಹಾಗಾಗಿ ಅವರಿಗೆ ಅವರ ಶರೀರದ ಮೇಲೆ ಪರಿವೆಯೇ ಇರಲಿಲ್ಲ. ಅವರಿಗೆ ಕೈಕಾಲು ನೋವು, ಎದೆನೋವುಗಳೆಲ್ಲ ಇದ್ದವು. ಆದರೆ ಅವರಿಗೆ ಅದು ಬಾಧಿಸಲೇ ಇಲ್ಲ. ಏಕೆಂದರೆ ದೇಹ ನಾನಲ್ಲ, ತನ್ನದೆಲ್ಲವೂ ದೇಶಕ್ಕಾಗಿ ಎನ್ನುವ ಭಾವನೆ ಅವರಿಗೆ ದೃಢವಾಗಿತ್ತು.

ಸಂತೋಷವೆಂದರೆ ಈಗ ವಾತಾವರಣ ಬದಲಾಗುತ್ತಿದೆ. ದೇವರು, ದೇವಸ್ಥಾನ, ವಾಸ್ತು, ಆಯುರ್ವೇದ ಜ್ಯೋತಿಷಗಳೆಲ್ಲ ಈಗ ಜನಮನ್ನಣೆಗಳಿಸಿಕೊಳ್ಳುತ್ತಿವೆ. ಇವನ್ನು ಬಹಿರಂಗವಾಗಿ ಹೇಳಲು ಹೆದರುವ ಕಾಲದಲ್ಲಿ ಗುರೂಜಿಯವರು, ಕಾಕಡೇಜಿಯವರು ಅದನ್ನು ಹೋಗಲಾಡಿಸಲು ದುಡಿದರು. ಅವರ ನೆನಪಿನಿಂದ ಸ್ಫೂರ್ತಿಗೊಳ್ಳುವ ಭಾಗ್ಯ ನಮ್ಮದಾಗಿದೆ.



MOBILE
BANKING
Mobile Payment Service
Start transacting with your mobile. Anytime. Anywhere.
E-COMMERCE
ONLINE PAYMENT THROUGH
DEBIT CARD
Bill Payments, Online Shopping. Anytime. Anywhere.
KBL GOLD
DEBIT CARD
More Value | More Benefits | More Privileges
Karnataka Bank Ltd.
4619 XXXX XXXX 1316
VISA
Karnataka Bank Ltd.
Your Family Bank. Across India.
Regd. & Head Office: Mangalore - 575 002




ALWAYS AHEAD TO EXCEL!
Enjoy the full range of our banking services
Insurance Services
Multi-Branch Banking
Gold Debit Card
Internet Banking
Mobile Banking
Demat Services
Mutual Fund
E-Commerce
Student International Prepaid Card
MoneyPlant VISA International Debit Card
Core Banking Solution
MultiCity Cheque Facility
COMMITTED TO OFFER YOU 100% SATISFACTION WITH OUR BANKING SERVICES
Karnataka Bank Ltd.
Your Family Bank. Across India.
Regd. & Head Office: Mangalore - 575 002

## "ಸದಾನಂದ" ಲೋಕಾರ್ಪಣೆ ಬೆಂಗಳೂರು 15.10.2011



ಅಧ್ಯಕ್ಷರ ಭಾಷಣ: ನ್ಯಾಯಮೂರ್ತಿ ಡಾ. ರಾಮಾಜೋಯಿಸ್



ಪೂಜ್ಯ ಹೆಗ್ಗಡೆಯವರಿಗೆ ಸನ್ಮಾನ ವಿಜಯಕುಮಾರರಡ್ಡಿಯವರಿಂದ



ಬಿ.ಜಿ. ಶ್ರೀರಂಗಯ್ಯನವರಿಗೆ ಹೆಗ್ಗಡೆಯವರಿಂದ ಸನ್ಮಾನ

Regd. No. CPMG/KA/BGS/636-2009-11 Total Pages 44
Post at G.P.O. Bangalore ON 5TH OF EVERY MONTH RNI No. KARKAN/2002/8081



“ಸದಾನಂದ” ಲೋಕಾರ್ಪಣೆ ಕಾರ್ಯಕ್ರಮ 15.10.2011 ಬೆಂಗಳೂರು

ಇಂದ
**ಹಿಂದುವಾಣಿ**
'ಧರ್ಮಶ್ರೀ', 91, ಶಂಕರಪುರಂ, ಬೆಂಗಳೂರು – 560 004

# ಹಿಂದುವಾಣಿ

Printed & published by Sri Ramesh M. Parande, Edited by Sri T.A.P. Shenoy on behalf of Vishwa Hindu Parishad, Dharmashree, 91, Shankarapura, Bangalore - 4 Printed at Vishwasprints, Chamarajpet, Bangalore - 18 Ph: 080-26606088, 26604835